# ಮುಡಾ ವಿಚಾರದಲ್ಲಿ ಹಾದಿಬೀದಿಗಳಲ್ಲಿ ಮೂಡರಂತೆ ವರ್ತಿಸುತ್ತಿರುವ ಬಿಜೆಪಿ



### ಕಿಡಿಕಾರಿದ ಶಾಸಕ ಡಿ.ಜಿ. ಶಾಂತನಗೌಡ

ಹೊನ್ನಾಳಿ, ಆ.23- ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯನವರ ವಿರುದ್ಧ ಬಿಜೆಪಿ ನಡೆಸುತ್ತಿರುವ ಹೋರಾಟ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದ ಶಾಸಕ ಡಿ.ಜಿ. ಶಾಂತನಗೌಡ, ಮುಡಾ ಆರೋಪ ಮಾಡುತ್ತಿರುವವರು ಹಾದಿ - ಬೀದಿಗಳಲ್ಲಿ ಹೋರಾಟ ನಡೆಸುತ್ತಾ ಮೂಡರಂತೆ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಹೊನ್ನಾಳಿ ತಾಲ್ಲೂಕು ಕಾಂಗ್ರೆಸ್ ಪಕ್ಷ ಹಾಗೂ ಅಹಿಂದ ವರ್ಗ ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ಇಂದು ಬಿಜೆಪಿ ನಾಯಕರು ಸಿದ್ದರಾಮಯ್ಯ ನವರ ಬಗ್ಗೆ ಮಾಡುತ್ತಿರುವ ಆರೋಪವನ್ನು ಖಂಡಿಸಿ, ನಡೆಸಿದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಸುಳ್ಳಿನ ಪ್ರಭಾವಳಿಗೆ ಜನತೆ ಮರಳಾಗುವುದಿಲ್ಲ ಎಂದರು.

ಸಿದ್ದರಾಮಯ್ಯನವರ ಬಗ್ಗೆ ಒಂದು ಖಾಸಗಿ ದೂರಿಗೆ ರಾಜ್ಯಪಾಲರು ತನಿಖೆಗೆ ಆದೇಶಿಸಿದ್ದಾರೆ ರಾಜೀನಾಮೆ ಕೇಳಿಲ್ಲ. ಬಿಜೆಪಿ ನಾಯಕರು ಏಕೆ ಪಟ್ಟು ಹಿಡಿದು ಹೋರಾಟ ನಡೆಸುತ್ತಿದ್ದಾರೆ ? ಇದರಲ್ಲಿ ಕೇಂದ್ರ ಸರ್ಕಾರದ ಏನು ಸಂಚಿದೆ. ರಾಜ್ಯ ಬಿಜೆಪಿ ನಾಯಕರು ಕುಮ್ಮಕ್ಕಿನ ಕಾರಣವನ್ನು ವಿವರಿಸಿ, ಮುಡಾದ ವಿಷಯವನ್ನು ಸುದೀರ್ಘವಾಗಿ ವಿವರಿಸಿದ ಶಾಸಕರು, ಇದರಲ್ಲಿ ಸಿದ್ದರಾಮಯ್ಯನವರ ತಪ್ಪಿಲ್ಲ. ರಾಜೀನಾಮೆ ನೀಡುವ ಮಾತೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಮಾತನಾಡಿ, ಮುಡಾ ಸೈಟು ವಿಚಾರ ಚರ್ಚೆ ಬಿಜೆಪಿ ಅವಧಿಯದ್ದಾಗಿದ್ದು ಅಂದು ಸುಮ್ಮನಿದ್ದು, ಇದೀಗ ಇವರ ಹೋರಾಟಕ್ಕೆ ಅರ್ಥವಿಲ್ಲ ಎಂದರು.

ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಮೋಹನ್ ಮಾತನಾಡಿದರು.

ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಹೆಚ್.ಎ ಉಮಾಪತಿ ಮಾತನಾಡಿ, ಬಿಜೆಪಿ ಮುಖಂಡರಾದ ಯಡಿಯೂರಪ್ಪನವರು ಹೊನ್ನಾಳಿಯ ಮಿಲ್ ನಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದ್ದು ಅವರ ಅವಧಿಯಲ್ಲಿ ಕೆಲಸ ಮಾಡಿದ ಇತರರು ಈಗಲೂ ಕೂಲಿ ಕೆಲಸ ಮಾಡುತ್ತಲೇ ಇದ್ದಾರೆ. ಭ್ರಷ್ಟಾಚಾರ ಎಂದರೆ ಏನು ಎಂಬುದು ಬಿಜೆಪಿ ನಾಯಕರಿಂದಲೇ ತಿಳಿಯಬೇಕಿದೆ ಎಂದು ಮಾರ್ಮಿಕವಾಗಿ ಹೇಳಿದರು.

ಹೊನ್ನಾಳಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ, ಸಾಸ್ವೇಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್.ನಾಗಪ್ಪ, ಮಹಿಳಾ ತಾಲ್ಲೂಕು ಅಧ್ಯಕ್ಷರಾದ ಪುಷ್ಪಾ ರವೀಶ್, ಮುಖಂಡರಾದ ಆರ್.ಚಂದ್ರಶೇಖರ್, ವಾಜಿದ್, ಡಿ.ಜೆ.ವಿಶ್ವನಾಥ್, ಶಿವರಾಜ್ ನಾಯಕ್, ಶೇಖರಪ್ಪ, ಅರಕೆರೆ ಮಧು ಗೌಡ ಇನ್ನಿತರರು ಮಾತನಾಡಿದರು.

ತಹಶೀಲ್ದಾರ್ ಪಟ್ಟರಾಜೇಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

# ಶಾಸಕರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಂದಲೇ ಮುಸ್ಲಿಂ ಸಮಾಜಕ್ಕೆ ಅನ್ಯಾಯ

### ಹರಪನಹಳ್ಳಿ

ಹರಪನಹಳ್ಳಿ, ಆ.23- ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆ ಮುಸ್ಲಿಮರ ಕೈ ತಪ್ಪಲು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಅವರೇ ನೇರ ಹೊಣೆ ಆಗಿದ್ದಾರೆ ಎಂದು ಮುಸ್ಲಿಂ ಸಮಾಜದ ಮುಖಂಡರು ಆರೋಪಿಸಿದ್ದಾರೆ.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಕೂಡಲೇ ಅಂಜಿನಪ್ಪ ಅವರು ರಾಜೀನಾಮೆ ನೀಡಬೇಕೆಂದು ತಾಲ್ಲೂಕಿನ ಮುಸ್ಲಿಂ ಸಮಾಜವು ಒತ್ತಾಯಿಸಿದೆ.

ಒಟ್ಟು 27 ಸದಸ್ಯರ ಬಲವಿರುವ ಪುರಸಭೆಯಲ್ಲಿ 14 ಕಾಂಗ್ರೆಸ್, 10 ಬಿಜೆಪಿ, 2 ಪಕ್ಷೇತರ ಮತ್ತು 1 ಜೆಡಿಎಸ್ ಸದಸ್ಯರಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲವಿದ್ದರೂ 2 ಬಾರಿ ಅಧಿಕಾರ ಕಳೆದುಕೊಂಡಿತ್ತು. 28 ಸಾವಿರ ಮುಸ್ಲಿಂ ಮತಗಳನ್ನು ಹೊಂದಿರುವ ಈ ತಾಲ್ಲೂಕು, ಈವರೆಗೂ ಮುಸ್ಲಿಂ ಸಮಾಜಕ್ಕೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ನೀಡಿಲ್ಲ ಎಂದು ದೂರಿದ್ದಾರೆ.

ಸ್ವತಃ ಕಾಂಗ್ರೆಸ್ ಪಕ್ಷದವರೇ ಮುಸ್ಲಿಂ ಜನಾಂಗಕ್ಕೆ ಪುರಸಭೆಯ ಅಧ್ಯಕ್ಷ ಸ್ಥಾನ ಸಿಗಬಾರದೆಂಬ ಷಡ್ಯಂತ್ರ ಮಾಡಿರುವುದು ಸರಿಯಲ್ಲ ಎಂದಿದ್ದಾರೆ. ಕೇಂದ್ರದ ಬಿಜೆಪಿ ನೇತೃತ್ವದ ಮೋದಿ ಸರ್ಕಾರವು ಮುಸ್ಲಿಮರಿಗೆ ಮಾಡಿದ ಅನ್ಯಾಯವನ್ನು ಮನದಲ್ಲಿ ಇಟ್ಟುಕೊಂಡು ಶೇ.100ರಷ್ಟು ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡುತ್ತಾ ಬಂದಿದ್ದೇವೆ. ಆದರೂ ಈ ತಾಲ್ಲೂಕಿನಲ್ಲಿ ಈ ಸಮಾಜಕ್ಕೆ ಬಾರಿ ಅನ್ಯಾಯವಾಗಿದೆ ಎಂದಿದ್ದಾರೆ.

ಮುಸ್ಲಿಂ ಸಮಾಜದ ಅಭ್ಯರ್ಥಿಯೊಬ್ಬರು ಪುರಸಭೆಯ ಅಧ್ಯಕ್ಷರಾಗುವುದನ್ನು ಸಹಿಸದ ಕಾಂಗ್ರೆಸ್ ಪಕ್ಷದವರೇ ಈ ರೀತಿ ಮಾಡಿರುವುದು ದುರದೃಷ್ಟಕರ ಸಂಗತಿ ಎಂದು ಅವರು ಹೇಳಿದರು.

ತಾಲ್ಲೂಕಿನಲ್ಲಿ ಮುಸ್ಲಿಂ ಸಮಾಜವನ್ನು ರಾಜಕೀಯ ವಾಗಿ ಹತ್ತಿಕ್ಕುವ ಪ್ರಯತ್ನ ನಡೆದಿದ್ದು, ಈ ರೀತಿಯ ಮನಸ್ಥಿತಿ ಪಕ್ಷದಲ್ಲಿ ಮುಂದುವರೆದಿದ್ದೇ ಆದಲ್ಲಿ ಬರುವ ಚುನಾವಣೆಗಳಲ್ಲಿ ಮುಸ್ಲಿಂ ಸಮಾಜ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದೆ ಎಂಬ ಎಚ್ಚರಿಕೆಯನ್ನು ಮುಸ್ಲಿಂ ಸಮಾಜದ ಮುಖಂಡರಾದ ಪುರಸಭೆ ಮಾಜಿ ಸದಸ್ಯ ಡಿ. ಜಾವೂರ್, ಗ್ರಾ.ಪಂ. ಮಾಜಿ ಸದಸ್ಯ ಮಾಬುಸಾಬ್ ಸಾಗೋಲಿ, ದಾದಾಪೀರ್, ಕೆ. ಜಹಾಂಗೀರ್, ಪಿ. ಯುಸೂಫ್, ಸೇರಿದಂತೆ ಇತರರು ತಿಳಿಸಿದ್ದಾರೆ.

# ವಕ್ಫ್ ಸಲಹಾ ಸಮಿತಿ ಜಿಲ್ಲಾಧ್ಯಕ್ಷರಾಗಿ ಇರ್ಷದ್ ಅಹಮದ್



ದಾವಣಗೆರೆ, ಆ.23- ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನಗರದ ಬಿ.ಎನ್.ಇರ್ಷದ್ ಅಹಮದ್ ಅವರು ನೇಮಕಗೊಂಡಿದ್ದಾರೆ.

# ನಗರದಲ್ಲಿ ನಾಳೆ ಮಹಾ ರುದ್ರಾಭಿಷೇಕ

ದಾವಣಗೆರೆ, ಆ.23- ಲೇಬರ್ ಕಾಲೋನಿಯ ಶ್ರೀ ಕರಿಬಸಜ್ಜಯ್ಯ ದೇವಸ್ಥಾನದಲ್ಲಿ ಆ.26ರ ಬೆಳಗ್ಗೆ 7.30ಕ್ಕೆ ಕಡೆ ಶ್ರಾವಣ ನಿಮಿತ್ತ ಸ್ವಾಮಿಗೆ ಮಹಾ ರುದ್ರಾಭಿಷೇಕ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ.

# ನಗರದಲ್ಲಿ ಇಂದು ದೇವನಗರಿ ಪ್ರೊ ಇಮೇಜ್-2024 ಪ್ರದರ್ಶನ

ದಾವಣಗೆರೆ, ಆ. 23 - ಜಿಲ್ಲಾ ಫೋಟೋಗ್ರಾಫರ್ಸ್ ಮತ್ತು ವಿಡಿಯೋಗ್ರಾಫರ್ಸ್ ಸಂಘ ಹಾಗೂ ಫೋಟೋಗ್ರಾಫರ್ಸ್ ಯೂತ್ ವೆಲ್‌ಫೇರ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 24 ಹಾಗೂ 25ರಂದು ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ 'ದೇವನಗರಿ ಪ್ರೊ ಇಮೇಜ್-2024' ಪ್ರದರ್ಶನ ಹಾಗೂ 185ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಸಮಾರಂಭ ಏರ್ಪಡಿಸಲಾಗಿದೆ.


ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಪಿ. ಅಗಡಿ ಮಾತನಾಡಿ, ನಾಳೆ ದಿನಾಂಕ 24ರಂದು ಬೆಳಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಶಿವಗಂಗಾ ಬಸವರಾಜು, ಜಿಲ್ಲಾ ಫೋಟೋಗ್ರಾಫರ್ಸ್ ಮತ್ತು ವಿಡಿಯೋಗ್ರಾಫರ್ಸ್ ಸಂಘದ ಅಧ್ಯಕ್ಷ ವಿಜಯ್ ಜಾಧವ್, ಶಿವಮೊಗ್ಗದ ಕೆ.ಟಿ. ಶ್ರೀನಿವಾಸ್, ಹಾವೇರಿಯ ರಾಜೇಂದ್ರ ರಿತ್ತಿ, ಗದಗದ ಪವನ್ ಕೆ. ಮೆಹರವಾಡೆ, ಚಿತ್ರದುರ್ಗದ ಸೈಯ್ಯದ್ ರಹಮತ್‌ವುಲ್ಲಾ, ವಿಜಯನಗರದ ಕೆ.ರಾಮಣ್ಣ, ಕೊಪ್ಪಳದ ವಿಜಯಕುಮಾರ್ ವಸ್ತ್ರದ್ ಭಾಗವಹಿಸುವರು.

ಅಂದೇ ಸಂಜೆ 5.30ಕ್ಕೆ ನಡೆಯುವ ಛಾಯಾಸಾಧಕರಿಗೆ ಸನ್ಮಾನ ಮತ್ತು ಛಾಯಾಗ್ರಾಹಕರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ.ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ಎಸ್.ಆರ್ ತಿಪ್ಪೇಸ್ವಾಮಿ, ಎಸ್.ದುಗ್ಗಪ್ಪ ಪಾಲ್ಗೊಳ್ಳವರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ವಿಜಯ ಜಾಧವ್, ಎಚ್.ಕೆ.ಸಿ ರಾಜು, ಎಸ್. ದುಗ್ಗಪ್ಪ, ಎನ್.ಮಲ್ಲಿಕಾರ್ಜುನ್, ಬಿ.ಎಂ. ತಿಪ್ಪೇಸ್ವಾಮಿ, ತಿಲಕ್, ಶಂಭಣ್ಣ, ಕೆ.ಪಿ. ನಾಗರಾಜ್, ಮಿಥುನ್, ಅರುಣ್ ಕುಮಾರ್, ಕೊಟ್ರೇಶ್, ಪ್ರಕಾಶ್, ಕಿಶೋರ್, ಮಹಾಂತೇಶ್ ಇತರರು ಇದ್ದರು.

# ಹರಿಹರದಲ್ಲಿ ಇಂದು ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣೋತ್ಸವ



ಹೊಸಭರಂಪುರ ಬಡಾವಣೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಇಂದು ಮಧ್ಯಾಹ್ನ 12.15ಕ್ಕೆ ಶ್ರೀ ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣೋತ್ಸವ ನಡೆಯಲಿದೆ. ಬೆಳಗ್ಗೆ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಗೆ ಮಹಾ ರುದ್ರಾಭಿಷೇಕ, ಅಲಂಕಾರ ಮಹಾಮಂಗಳಾರತಿ ನಡೆದ ನಂತರ ರಥೋತ್ಸವದ ಕಲ್ಯಾಣೋತ್ಸವ ಜರುಗಲಿದೆ.

ಮಧ್ಯಾಹ್ನ ಪ್ರಸಾದ ವಿನಿಯೋಗ ನಡೆಯಲಿದ್ದು, ಸಂಜೆ 5ರಿಂದ ಶ್ರೀ ರಾಘವೇಂದ್ರಸ್ವಾಮಿ ಭಜನಾ ಮಂಡಳಿ, ಮಧ್ವ ಸಂಘ ಕೋಟೆ ಇವರಿಂದ ಭಜನೆ ಕಾರ್ಯಕ್ರಮ ನೆರವೇರಲಿದೆ ಎಂದು ದೇವಸ್ಥಾನ ಸಮಿತಿಯ ಮುಖಂಡ ಲಕ್ಷ್ಮಣ್ ತಿಳಿಸಿದ್ದಾರೆ.

# ರಾಣೆಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

220 ಕೆವಿ ರಾಣೇಬೆನ್ನೂರು ವಿದ್ಯುತ್ ಉಪ ಕೇಂದ್ರದಿಂದ ಹೊರಡುವ ರಾಣೇಬೆನ್ನೂರು ನಗರದ ಎಫ್-6 ಸಿದ್ಧಾರೂಢ ಮಠ ಫೀಡರ್ ನ ಇಂಡಸ್ಟ್ರಿಯಲ್ ಏರಿಯಾ, ಸುವರ್ಣ ಪಾರ್ಕ್, ನಂದಿ ಲೇಔಟ್, ಓಮ್ ಪಬ್ಲಿಕ್, ಕಾಟೆವಾಡ ಡಾಬಾ ಹಾಗೂ ಹಾಸ್ಟೆಲ್ ಹತ್ತಿರ ಸ್ಥಳಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ ವಿದ್ಯತ್ ವ್ಯತ್ಯಯ ಉಂಟಾಗಲಿದೆ.

# ಜಗಳೂರು : ಜಾನುವಾರುಗಳ ಆರೋಗ್ಯಕ್ಕೆ ಖನಿಜಾಂಶವುಳ್ಳ ಆಹಾರ ಮುಖ್ಯ



### ಪಶು ವಿಜ್ಞಾನ ತಜ್ಞ ಡಾ.ಜಿ.ಕೆ. ಜಯದೇವಪ್ಪ ಅಭಿಮತ

ಜಗಳೂರು, ಆ.23- ಜಾನುವಾರುಗಳ ಉತ್ತಮ ಆರೋಗ್ಯಕ್ಕೆ ಸಮತೋಲನ ಖನಿಜಾಂಶವುಳ್ಳ ಆಹಾರ ಮುಖ್ಯ ಎಂದು ಐಸಿಎಆರ್- ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಪಶುವಿಜ್ಞಾನ ತಜ್ಞ ಡಾ.ಜಿ.ಕೆ. ಜಯದೇವಪ್ಪ ತಿಳಿಸಿದರು.

ದಾವಣಗೆರೆಯ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಮತ್ತು ಜಗಳೂರು ಪಶುಪಾಲನಾ ಇಲಾಖೆಯಿಂದ ಶುಕ್ರವಾರ ಪರಿಶಿಷ್ಟ ಪಂಗಡದ ಉಪ ಯೋಜನೆಯಡಿ ತಾಲ್ಲೂಕಿನ ಬಸಪ್ಪನಹಟ್ಟಿ ಗ್ರಾಮದಲ್ಲಿ ಆಯೋಜಿಸಿದ್ದ 'ಜಂತು ನಿವಾರಣಾ ಹಾಗೂ ಜಾನುವಾರು ಆರೋಗ್ಯ ಶಿಬಿರದಲ್ಲಿ' ಮಾತನಾಡಿದರು. ಪಶುಪಾಲನೆಯಲ್ಲಿ ಪ್ರಮುಖ ಹಂತಗಳಾದ ಗರ್ಭ ಧರಿಸುವಿಕೆ, ಉತ್ತಮ ಹಾಲಿನ ಇಳುವರಿ ಮತ್ತು ಗುಣಮಟ್ಟದ ಕರುಗಳ ಪಾಲನೆ ಬಗ್ಗೆ ಪಶುಪಾಲಕರು ಗಮನ ಹರಿಸ ಬೇಕು ಹಾಗೂ ಜಾನುವಾರುಗಳ ದೇಹ ತೂಕದ ಅನುಸಾರವಾಗಿ ಪೋಷಕಾಂಶ ಪೂರೈಸುವುದು ಬಹಳ ಮುಖ್ಯ ಎಂದು ತಿಳಿಸಿದರು.

ತಾಲ್ಲೂಕು ಸಹಾಯಕ ಪಶು ನಿರ್ದೇಶಕ ಡಾ. ಲಿಂಗರಾಜ್ ಮಾತನಾಡಿ, ಮೇವಿನ ಬೀಜದ ಕಿಟ್ ಮತ್ತು ರಾಸುಗಳಿಗೆ ಉತ್ತಮ ಲಸಿಕಾ ಶಿಬಿರಗಳನ್ನು ಇಲಾಖೆಯಿಂದ ಒದಗಿಸುತ್ತಿದ್ದು, ರೈತರು ಸದುಪಯೋಗ ಪಡೆಯಬೇಕೆಂದು ಹೇಳಿದರು.

ಗ್ರಾಮದ 130ಕ್ಕೂ ಹೆಚ್ಚು ರಾಸುಗಳಿಗೆ ಜಂತು ಹುಳ ನಿವಾರಣಾ ಔಷಧಿ ಹಾಗೂ ಉಚಿತ ಆರೋಗ್ಯ ಶಿಬಿರವನ್ನು ಪಶು ವೈದ್ಯಾಧಿಕಾರಿಗಳಾದ ಡಾ.ಜಿ.ಕೆ ಜಯದೇವಪ್ಪ, ಡಾ. ವೀರೇಶ್, ಡಾ. ಚೇತನ್ ನೆರವೇರಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ ಬಸವನಗೌಡ, ಕೃಷಿ ವಿಜ್ಞಾನಿ ಡಾ.ಟಿ.ಜಿ. ಅವಿನಾಶ್, ರೈತರಾದ ಕೃಷ್ಣಮೂರ್ತಿ, ಶಶಿಕುಮಾರ್ ಹಾಗೂ ಇತರರಿದ್ದರು.


**ಸೈಟು / ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 14ನೇ ಕ್ರಾಸ್, ಉತ್ತರ ದಿಕ್ಕಿನ 30x60 ಅಳತೆಯ ನಿವೇಶನ ಹಾಗೂ ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, 7ನೇ ಕ್ರಾಸ್‌ನಲ್ಲಿ 38x42 ಅಳತೆಯ ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ.
95388 34999, 86606 25034

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
ಮೊ. 93431 10009

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬಾಡಿಗೆಗೆ ಇದೆ**
5ನೇ ಮೇನ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನ ಹಿಂಭಾಗ, ಪ್ರೊಫೆಷನಲ್ ಕೋರಿಯರ್ ಎದುರು ಆಫೀಸ್ ಉಪಯೋಗಕ್ಕೆ ಬಾಡಿಗೆಗೆ ಇದೆ.
98453 29030
78929 53758

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಸಮಯ 8:30Am to 6 Pm
89700 08040

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
98441 24217
98458 61220

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಬಾಡಿಗೆಗೆ ಇದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**ಸೈಟುಗಳು ಮಾರಾಟಕ್ಕಿವೆ**
ಕೊಂಡಜ್ಜಿ - ಬುಳ್ಳಾಪುರದಲ್ಲಿ, ಕೆಹೆಚ್‌ಬಿ ಲೇಔಟ್‌ನಲ್ಲಿ 25x30 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
96111 44565
97434 47178

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ. (1550/- ಚದುರ ಅಡಿ ) ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
97421 66799
98452 36274

**ಲೀಸ್‌ಗೆ / ಬಾಡಿಗೆಗಿದೆ**
ವಿಜಯನಗರ RTO ಆಫೀಸ್ ಹತ್ತಿರ, ದಾವಣಗೆರೆ. 1ನೇ ಮಹಡಿ 40x40, 10x15ರ ಒಟ್ಟು 9 ರೂಂಗಳು, ದಕ್ಷಿಣ ಬಾಗಿಲು. 2ನೇ ಮಹಡಿ 40x40, 20x20ರ ಒಟ್ಟು 4 ರೂಂಗಳು. ನರ್ಸಿಂಗ್ ಹೋಂ/ಪಿಜಿ ಹಾಸ್ಟೆಲ್ / ಆಶ್ರಮ / ಕಂಪ್ಯೂಟರ್ / ಟೈಲರಿಂಗ್‌ಗೆ ಯೋಗ್ಯ. ದೇವರಾಜ ಅರಸ್ ಬಡಾವಣೆ, ಎ ಬ್ಲಾಕ್, ದಾವಣಗೆರೆ. 2BHK ಮನೆ, ದಕ್ಷಿಣ ಬಾಗಿಲು, ಬಾಡಿಗೆ 6k, 2BHK ಮನೆ, ಪೂರ್ವ ಬಾಗಿಲು ಲೀಸ್‌ಗೆ 5.5 ಲಕ್ಷ, ಬೋರ್ ವೆಲ್, ಕಾರ್ಪೊರೇಷನ್ ನೀರು, ಪಾರ್ಕಿಂಗ್ ಇದೆ.
99022 99961, 97417 46205
73493 97287, 84312 55250

**ಮಂಜುಶ್ರೀ ಅಸೋಸಿಯೇಟ್ಸ್**
ಜೆ.ಹೆಚ್. ಪಾಟೀಲ್ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ.
ಪೂರ್ವಕ್ಕೆ 30x50, ಉತ್ತರಕ್ಕೆ 30x50, MB ಸಿಟಿ 30x50,
ವಿಳಾಸ : ಯುರೋ ಸ್ಕೂಲ್ ಮುಂಭಾಗ, ನಾಗನೂರು ಮೇನ್ ರೋಡ್, ಶಾಮನೂರು. ಸಂಪರ್ಕಿಸಿ.
83173 63203, 99001 89458

**ನೀರಾವರಿ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 6 ಕಿ.ಮೀ. ಹತ್ತಿರದ ಪುಟಗನಾಳ ಗ್ರಾಮಕ್ಕೆ ಹೊಂದಿಕೊಂಡಿರುವ ಕೆಂಪು ಮಸಾರಿ ಹೊಲ, ಅಡಿಕೆ ಗಿಡ ಹಾಕಲು ಸೂಕ್ತವಾದ 4 ಎಕರೆ 16 ಸೇಂಟ್ಸ್ ಜಮೀನಿದೆ. 1 ಬೋರ್ ಇದೆ.
990084 15137, 63609 35608

**ಕಲ್ಯಾಣ ಬೆಳಕು ವಧು-ವರ ವೇದಿಕೆ**
ಜಂಗಮ ಮತ್ತು ಲಿಂಗಾಯತ ವಧು-ವರರ ಆನ್‌ಲೈನ್ ವೇದಿಕೆ - ಪ್ರವೇಶ ಶುಲ್ಕ ರೂ. 500/- ನಮ್ಮ ಗ್ರೂಪ್‌ಗಳಿಂದ ಮದುವೆ ನಿಶ್ಚಯವಾದರೆ ಯಾವುದೇ ಶುಲ್ಕ ಇರುವುದಿಲ್ಲ.
78291 46919

**ಬೇಕಾಗಿದ್ದಾರೆ**
ರೆಡಿಮೆಡ್ ಗಾರ್ಮೆಂಟ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ. ಬುನಿಯಾದ್ ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ. 577002
ಮೊ : 98445 82000

**ಸೈಟ್ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, # 402, ಅಳತೆ 22x100 ಅಡಿ, ಉತ್ತರಾಭಿಮುಖ
94492 35021
96117 94684

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಅಮರಾವತಿ ಕೆ.ಹೆಚ್.ಬಿ. ಮತ್ತು ಹೌಸಿಂಗ್ ಕಾಲೋನಿ ಪಕ್ಕದ ಹೆಚ್.ಆರ್. ಎಂ. ಬಡಾವಣೆಯಲ್ಲಿ 40x30 ಅಳತೆಯ ಪೂರ್ವ-ಪಶ್ಚಿಮ ಮುಖವುಳ್ಳ 4 ಸೈಟುಗಳು ನೇರ ಮಾಲೀಕರಿಂದ ಮಾರಾಟಕ್ಕಿವೆ. ಸಂಪರ್ಕಿಸಿ.
98809 33630

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ - 3 ಮತ್ತು ಸೇಲ್ಸ್ ಬಾಯ್ಸ್ - 2 ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ - 8310314540

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ, 60x40 East, Rate - 2600/- 40x50 North-East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ**
3ನೇ ಮೇನ್, 9ನೇ ಕ್ರಾಸ್, ವಿಜಯನಗರ ಬಡಾವಣೆ, ಹೊಸ RTO Office ಹತ್ತಿರ, 2nd Floor ಡಬಲ್ ಬೆಡ್ ರೂಮ್ ಮನೆ. ಸಸ್ಯಹಾರಿಗಳಿಗೆ ಮಾತ್ರ.
96200 20530

**1 BHK ಮನೆ ಬಾಡಿಗೆ/ ಲೀಜ್‌ಗೆ ಇದೆ**
1ನೇ ಮಹಡಿ ಮನೆ, #758/1, ಕಾವೇರಮ್ಮ ಶಾಲೆ ಹಿಂಭಾಗ, 4ನೇ ಮುಖ್ಯ ರಸ್ತೆ, 13ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ-2. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99648 66713, 99025 78036

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 40x60 East, 30x50 North, 30x40 East, 30x50 West. 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ವಿ.ಎಸ್.ಎಂಟರ್ ಪ್ರೈಸ್ ಕಂಪನಿ, ದಾವಣಗೆರೆ
ನುರಿತ ಡಾಟಾ ಎಂಟ್ರಿ, ನುರಿತ ಟ್ಯಾಲಿ ಮತ್ತು ನುರಿತ ಫೋರ್ ವ್ಹೀಲರ್ ಡ್ರೈವರ್ (ಲೈಸೆನ್ಸ್ ಹೊಂದಿರಬೇಕು.) (ದ್ವಿಚಕ್ರ ವಾಹನ ಇದ್ದವರಿಗೆ ಮೊದಲ ಆದ್ಯತೆ) ಸಂಬಳ 12 ರಿಂದ 20 ಸಾವಿರ ರೂ. ಸಂಪರ್ಕಿಸಿ
ಮೊ. : 81059 87003

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ಗೋಡೌನ್ ನಲ್ಲಿ ಕೆಲಸ ಮಾಡಲು ಉತ್ಸಾಹಿ ಹುಡುಗರು ಹಾಗೂ ಅಕೌಂಟೆಂಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ
74067 40635, 70196 73906

**ಮನೆ ಬಾಡಿಗೆಗೆ ಇದೆ**
#853/6 ಮೊದಲನೇ ಹಂತ, ಎರಡನೇ ಮೇನ್, 6ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಸಿಂಗಲ್ ಬೆಡ್ ರೂಮ್ ಮನೆ, CMC ಹಾಗೂ ಬೋರ್ ಎರಡೂ ನೀರಿನ ವ್ಯವಸ್ಥೆ ಇರುವ ವಿಶಾಲವಾದ ಪಾರ್ಕಿಂಗ್ ಇರುವ ಮನೆ. ಸಂಪರ್ಕಿಸಿ :
63618 93176

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ 'B' ಬ್ಲಾಕ್‌ನಲ್ಲಿ ಉತ್ತರ 30x50, 30x40 ಪೂರ್ವ ಸೈಟ್‌ಗಳು, ಬನಶಂಕರಿ ಬಡಾವಣೆಯಲ್ಲಿ 40x70 West face Commercial Siteಗಳು 24x44 ಕೆ.ಬಿ. ಬಡಾವಣೆಯಲ್ಲಿ, ಪೂರ್ವ-ದಕ್ಷಿಣ ಕಾರ್ನರ್ ಮನೆ ಮಾರಾಟಕ್ಕೆ ಇವೆ. SS Iteck Layout ನಲ್ಲಿ 30x50 ಹೊಸ ಮನೆ ಮಾರಾಟಕ್ಕೆ ಇವೆ. ಸಂಪರ್ಕಿಸಿ : ಸುರೇಶ್ ಪಿ.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಸೊಳ್ಳೆ ಮೆಷ್ ಹಾಕುತ್ತೇವೆ**
ನಮ್ಮಲ್ಲಿ ಸೊಳ್ಳೆ ಮೆಷ್ ಹಾಗೂ ಎಲ್ಲಾ ತರಹದ ಸೋಫಾ, ಕುಷನ್, ಸ್ಪಂಜ್ ಬೆಡ್ ಹಾಗೂ ವುಡ್ ಪಾಲೀಶ್ ಹಾಕಲಾಗುವುದು. ನಮ್ಮಲ್ಲಿ ಕಡಿಮೆ ಬೆಲೆಯಲ್ಲಿ ಹಳೇ ಸೋಫಾ ಸಿಗುತ್ತವೆ.
88614 38237

**WANTED GIRLS FOR JOB**
Office work administration/Tele Calling BSc.,/Msc., BCA/MCA, BE/B. Tech any Computer degree with good English Communcication
9738560365, 9019243459

**ಮನೆ ಬಾಡಿಗೆಗೆ / ಲೀಸ್‌ಗಿದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ. 1 BHK
(ಸಸ್ಯಹಾರಿಗಳಿಗೆ ಮಾತ್ರ)
94800 00417

**REQUIREMENT**
Receptionist
Age : 20-25
Salary: 10000 - 12000
Hairpoint Hair & beauty lounge, MCC `B' block, 7th main, 3rd cross, Davanagere.
9738664400, 08192220755

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**MCC 'B' BLOCK ನಲ್ಲಿ ಮನೆ ಮಾರಾಟಕ್ಕೆ**
60x40ಕಾರ್ನರ್, 40x60 ಪೂರ್ವ, 40x60 ಪಶ್ಚಿಮ, 22x60 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್ )
98440 63409, 97315 63409

**ROYALOAK FURNITURE**
we are Hiring
Sales & Marketing
Interview on 25.08.2024
Opp. Shellpetrol bunk, beside Sruthi Moters, P.B. Road, Davanagere-577006
Call on 63621 45757

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ERA GROUP OF COMPANIES**
CALL CENTRE
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ಚಿರಸ್ಮರಣೆ**



29ನೇ ವರ್ಷದ ಪುಣ್ಯಸ್ಮರಣೆ
ಲಿಂ. ಶ್ರೀ ಉತ್ತಂಗಿ ರುದ್ರಪ್ಪನವರು
ಸ್ವಾತಂತ್ರ್ಯ ಹೋರಾಟಗಾರರು
ನಿ. ಮ್ಯಾನೇಜರ್, ಲೋಕೋಪಯೋಗಿ ಇಲಾಖೆ
ಜನನ : 01.09.1922, ಲಿಂಗೈಕ್ಯ : 24.08.1995

24ನೇ ವರ್ಷದ ಪುಣ್ಯಸ್ಮರಣೆ
ಲಿಂ. ಶ್ರೀಮತಿ ಉತ್ತಂಗಿ ಕೊಟ್ರಮ್ಮನವರು
ಜನನ : 01.01.1934, ಲಿಂಗೈಕ್ಯ 25.02.2000

ನಮ್ಮೆಲ್ಲ ಪೂಜ್ಯರು, ಮಾರ್ಗದರ್ಶಕರು ಆಗಿದ್ದು, ಸರಳ ಸಜ್ಜನಿಕೆಯಿಂದ ಬಾಳಿ ಬದುಕಿ ನಮ್ಮನ್ನು ಅಗಲಿರುತ್ತೀರಿ. ನಿಮ್ಮಗಳ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಆದರ್ಶಗಳೇ ನಮ್ಮ ದಾರಿದೀಪ, ನೀವು ತೋರಿಸಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮಗಳ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತಾ ಸದಾ ನಿಮ್ಮಗಳ ಸ್ಮರಣೆಯಲ್ಲಿರುವ..

ಪುತ್ರರು : ಯು.ಆರ್. ಪ್ರಭುದೇವ, ನಿವೃತ್ತ ಪ್ರ.ದ.ಸ ದಾವಣಗೆರೆ, ಮಹಾನಗರ ಪಾಲಿಕೆ
ಯು.ಆರ್. ನಾಗರಾಜ, ಎಲ್‌ಐಸಿ ಪ್ರತಿನಿಧಿ
ಇಂ.ಯು.ಆರ್. ಕೊಟ್ರೇಶ್, ಸಿವಿಲ್ ಇಂಜಿನಿಯರ್ ಮತ್ತು ಇಂಟೀರಿಯರ್ ಡಿಸೈನರ್
ಪುತ್ರಿಯರಾದ : ಯು.ಆರ್. ಸರೋಜ,
ಯು.ಆರ್. ಮಂಜುಳ,
ಶ್ರೀಮತಿ ದ್ರಾಕ್ಷಾಯಣಿ ಶ್ರೀ ಕೆ.ಜಿ. ಪರಶಿವಮೂರ್ತಿ, ಶ್ರೀ ಗುರುಕೃಪ ಸೌಂಡ್ಸ್ ಸಿಸ್ಟಂ, ಪಿರಿಯಾಪಟ್ಟಣ
ಸೊಸೆ : ಶ್ರೀಮತಿ ನಂದಿನಿ ಎನ್.ವಿ ಶ್ರೀ ಕೊಟ್ರೇಶ್ ಯು.ಆರ್.
ಮೊಮ್ಮಕ್ಕಳಾದ : ಚಿ. ಪೃಥ್ವಿ ಕೆ. ಉತ್ತಂಗಿ
ಎನ್.ವಿ. ಭುವನ ಬಿನ್ ಲೇಟ್ ಶ್ರೀಮತಿ ಗಿರಿಜಾ ಶ್ರೀ ಎನ್.ಎಸ್.ವೀರಣ್ಣ
ವಿಶಿಷ್ಟಾ ಕ್ಯಾಡ್ ತರಬೇತಿ ಕೇಂದ್ರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.
ಶ್ರೀಮತಿ ಕಾವ್ಯ ಶ್ರೀ ಎಸ್. ಮಠ್ ಕೆ.ಆರ್. ನಗರ
ಗುರುಸ್ವಾಮಿ ಪರಶಿವಮೂರ್ತಿ ಕೆ.ಜಿ., ಕೃಪ ಪರಶಿವಮೂರ್ತಿ ಕೆ.ಜಿ.
ಮರಿಮೊಮ್ಮಗ : ವೇದಾಂತ ಎಸ್. ಮಠ್
08192 222205, 98861 65540

**Job Opportunities**
Required Lab Chemist. (Male Only) For Aradhya Chemicals & Fertilizers (Only BSc., Agri, Candidates Can Apply)
73537 70016
Email : acfdvg@gmail.com

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ಕಲ್ಲೇಶ್ವರ ಮಿಲ್‌ನಲ್ಲಿ 08 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್
ಗಣೇಶ್ ಲೇಔಟ್, ದಾವಣಗೆರೆ.
90605 45500, 99169 29713
74111 13888, 97390 89022

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**WE ARE HIRING**
PRIMARY SCHOOL Teachers for, Science, Social & English
Qualification : Any Degree
70199 82115
70194 66178

# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಆಗಸ್ಟ್ 24, 2024




## ನದಿ ನೀರಿನ ಮಹತ್ವ ಅರಿತರೆ ಬದುಕು ಸುಂದರ

### ತುಂಗಭದ್ರೆಗೆ ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ

ಹರಿಹರ, ಅ,23- ತುಂಗಭದ್ರಾ ನದಿ ನೀರಿನ ಪಾವಿತ್ರ್ಯತೆ ಮತ್ತು ಮಹತ್ವ ಅರ್ಥ ಮಾಡಿಕೊಂಡರೆ ನಮ್ಮ ಬದುಕು ಸುಂದರವಾಗಿ ಮತ್ತು ಆರೋಗ್ಯವಾಗಿ ಇರುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಸಂಸದ ಬಸವರಾಜ್ ಬೊಮ್ಮಾಯಿ ಅಭಿಪ್ರಾಯಪಟ್ಟರು.

ನಗರದ ತುಂಗಭದ್ರಾ ನದಿಗೆ ಪಂಚಮಸಾಲಿ ಮಹಿಳಾ ಘಟಕದ ವತಿಯಿಂದ ಬಾಗಿನ ಅರ್ಪಿಸುವ ಸಮಾರಂಭ, ದಾರ್ಶನಿಕರ ಭಾವಚಿತ್ರ ಬಿಡುಗಡೆ, ತುಂಗಾರತಿ ಸ್ಥಳದಲ್ಲಿ ಬೃಂದಾವನ ವನಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನೀರು ಇಲ್ಲದೇ ಹೋದರೆ ನಮ್ಮ ನಿತ್ಯದ ಬದುಕು ಉತ್ತಮ ರೀತಿಯಲ್ಲಿ ಸಾಗದು. ನಮ್ಮ ಬದುಕಿನ ಪ್ರಮುಖ ಅಂಗವಾಗಿರುವ ನೀರಿಗೆ ಹೆಚ್ಚು ಮಹತ್ವವನ್ನು ನೀಡಿದಾಗ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಹೇಳಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ತುಂಗಭದ್ರಾ ನದಿಯ ತಟದಲ್ಲಿ ತುಂಗಾರತಿಯ ಧಾರ್ಮಿಕ ಕಾರ್ಯ ಮತ್ತು ಬೃಂದಾವನ ಚಾಲನೆಯನ್ನು ಶ್ರೀಗಳು ಬರುವ ಜನವರಿ 14-15 ರಂದು ನೀಡುವುದಕ್ಕೆ ಮುಂದಾಗಿರುವು ದರಿಂದ ಎಲ್ಲಾ ರೀತಿ ಸಹಕಾರ ನೀಡುವುದಾಗಿ ಹೇಳಿದರು.

ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮೀಜಿ ಮಾತನಾಡಿ, ತುಂಗಾರತಿ ಸ್ಥಳವು ಸ್ವರ್ಗದ ವಾತಾವರಣದಲ್ಲಿ ಅಭಿವೃದ್ಧಿ ಆಗಿದ್ದರೆ, ಅದಕ್ಕೆ ಕಾರಣ ಸಂಸದರಾದ ಬಸವರಾಜ್ ಬೊಮ್ಮಾಯಿ ಎಂದರು. ಇಲ್ಲಿನ ಸ್ಥಳವನ್ನು ಎಲ್ಲಾ ಜನಾಂಗದ ಸಿದ್ಧಾಂತದ ಸ್ಥಳವನ್ನಾಗಿ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ, ಮಡಿವಾಳ ಮಾಚಿದೇವ ಸ್ವಾಮೀಜಿ, ಭೋವಿ ಪೀಠದ ಹಿಮ್ಮಡಿ ಸಿದ್ದರಾಮೇಶ್ವರ (5ನೇ ಪುಟಕ್ಕೆ)

# ಸಿಎಂ ಬೆಂಬಲಕ್ಕೆ ಹೈಕಮಾಂಡ್

### ಚುನಾಯಿತ ಸರ್ಕಾರದ ಅಸ್ಥಿರಕ್ಕೆ ವ್ಯವಸ್ಥಿತ ದಾಳಿ ಎಂದು ತರಾಟೆ

ನವದೆಹಲಿ, ಆ. 23 – ಮುಡಾ ವಿವಾದದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತಿರುವ ಕಾಂಗ್ರೆಸ್ ಹೈಕಮಾಂಡ್, ಕೇಂದ್ರ ಸರ್ಕಾರ ರಾಜ್ಯಪಾಲರನ್ನು ಕೈಗೊಂಬೆ ಮಾಡಿಕೊಂಡು ಚುನಾಯಿತ ಸರ್ಕಾರ ಅಸ್ಥಿರಗೊಳಿಸಲು ವ್ಯವಸ್ಥಿತ ದಾಳಿ ನಡೆಸುತ್ತಿದೆ ಎಂದು ಆರೋಪಿಸಿದೆ.

ಇದಕ್ಕೆಲ್ಲ ಮಣಿಯುವುದಿಲ್ಲ. ಈ ವಿಷಯವನ್ನು ನ್ಯಾಯಾಲಯದಲ್ಲಿ ಎದುರಿಸಲಾಗುವುದು ಎಂದು ಕಾಂಗ್ರೆಸ್ ತಿಳಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರು ಅನುಮತಿ ನೀಡಿದ್ದು ಕಾಂಗ್ರೆಸ್ ಆಕ್ರೋಶಕ್ಕೆ ಕಾರಣವಾಗಿದೆ.

ಈ ವಿಷಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಅವರನ್ನು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಭೇಟಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿಯಾಗಿರುವ



ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಅವರು ಉಪಸ್ಥಿತರಿದ್ದರು.

ಈ ಭೇಟಿಯ ನಂತರ ಮಾತನಾಡಿದ ಸಿದ್ದರಾಮಯ್ಯ, ಕರ್ನಾಟಕದ ಪರಿಸ್ಥಿತಿಯನ್ನು ಪಕ್ಷದ ಉನ್ನತರಿಗೆ ತಿಳಿಸಿದ್ದೇನೆ. ಈ ಪ್ರಕರಣ ನ್ಯಾಯಾಲಯದಲ್ಲಿದೆ. ನಮಗೆ ಈ ನೆಲದ ಕಾನೂನಿನಲ್ಲಿ ನಂಬಿಕೆ ಇದೆ. ರಾಜ್ಯಪಾಲರು ತೆಗೆದುಕೊಂಡಿರುವ ಕ್ರಮ ಸಂವಿಧಾನಬಾಹಿರ ಹಾಗೂ ಅಕ್ರಮ. ನಮಗೆ ನ್ಯಾಯಾಲಯಗಳಲ್ಲಿ ನ್ಯಾಯ ಸಿಗಲಿದೆ ಎಂದು ತಿಳಿಸಿದರು.

ಸುರ್ಜೇವಾಲ ಮಾತನಾಡಿ, ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಕರ್ನಾಟಕದ ಹಿರಿಯ ಸಚಿವರ ಜೊತೆ ವಿಸ್ತಾರವಾಗಿ ಚರ್ಚಿಸಿದ್ದಾರೆ ಎಂದರು.

ಕರ್ನಾಟಕದ ರಾಜಕೀಯ ಪರಿಸ್ಥಿತಿ ಕುರಿತು ವಿವರವಾಗಿ (5ನೇ ಪುಟಕ್ಕೆ)

### ಸಿಎಂಗೆ ಮತ್ತೊಂದು ಸಮಸ್ಯೆ

**ನೇಮಕಾತಿ ಲಂಚ ಪ್ರಕರಣದಲ್ಲಿ ಲೋಕಾಯುಕ್ತಕ್ಕೆ ನೋಟಿಸ್**

ಬೆಂಗಳೂರು, ಆ. 23 - ಬೆಂಗಳೂರು ಟರ್ಫ್ ಕ್ಲಬ್‌ಗೆ ಸರ್ಕಾರದ ವತಿಯಿಂದ ಸ್ಟೀವರ್ಡ್ ಹುದ್ದೆಗೆ ನೇಮಿಸುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಕ್ತಿಯೊಬ್ಬರಿಂದ ಲಂಚ ಪಡೆದ ಆರೋಪದ ಬಗ್ಗೆ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯವು ಲೋಕಾಯುಕ್ತಕ್ಕೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದೆ.

ಬೆಂಗಳೂರು ಟರ್ಫ್ ಕ್ಲಬ್‌ಗೆ ಸ್ಟೀವರ್ಡ್ ನೇಮಿಸುವುದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 1.3 ಕೋಟಿ ರೂಪಾಯಿಗಳ ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು. 2013ರ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಲಂಚ ಪಡೆಯಲಾಗಿದೆ ಎಂದು ಬಿಜೆಪಿ ನಾಯಕ ಎನ್.ಆರ್. ರಮೇಶ್ ಅವರು ದೂರಿದ್ದರು.

ಎಲ್. ವಿವೇಕಾನಂದ ಎಂಬುವವರು ಲಂಚ ನೀಡಿರುವುದಾಗಿ ಆರೋಪಿಸಲಾಗಿತ್ತು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದು ಲಂಚವಲ್ಲ, ಸಾಲ ಪಡೆದಿರುವುದಾಗಿ ಹೇಳಿದ್ದರು. ಈ ಬಗ್ಗೆ ರಮೇಶ್ ಅವರು ಲೋಕಾಯುಕ್ತರಲ್ಲಿ ದೂರು ದಾಖಲಿಸಿದ್ದರು. ಆದರೆ, ಈ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಎಂದು ಲೋಕಾಯುಕ್ತ (5ನೇ ಪುಟಕ್ಕೆ)

### ಕನ್ನಡ ಫಲಕ ಕಡ್ಡಾಯಕ್ಕೆ ಆದೇಶ

ಬೆಂಗಳೂರು, ಆ. 23 - ಸರ್ಕಾರದ ಎಲ್ಲಾ ಇಲಾಖೆ, ಆಯುಕ್ತಾಲಯ, ನಿರ್ದೇಶನಾಲಯ, ನಿಗಮ, ಮಂಡಳಿ, ಪ್ರಾಧಿಕಾರಗಳ ಆವರಣಗಳಲ್ಲಿನ ಹೆಸರು, ಪದನಾಮ, ಸೇವಾ ಅವಧಿಯ ನಾಮಫಲಕಗಳು, ಮಾರ್ಗಗಳ ಸೂಚನಾ ಫಲಕಗಳು, ಇನ್ನಿತರೇ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಪ್ರದರ್ಶಿಸ ಬೇಕು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಆದೇಶ ಹೊರಡಿಸಿದ್ದಾರೆ. ತೀರಾ ಅನಿವಾರ್ಯವಿದ್ದಲ್ಲಿ ಮಾತ್ರ ಕನ್ನಡ ಭಾಷೆಯು ಶೇ. 60 ರಷ್ಟು ನಾಮಫಲಕದ ಮೇಲ್ಭಾಗದಲ್ಲಿರುವಂತೆ ಹಾಗೂ ಶೇ. 40 ರಷ್ಟು ಆಂಗ್ಲಭಾಷೆಯಲ್ಲಿರುವಂತೆ ನಾಮಫಲಕ ರೂಪಿಸಲು ಅವಕಾಶ ನೀಡಲಾಗಿದೆ.

## ಪರಿಶಿಷ್ಟರ ತೀರ್ಪಿನ ಬಗ್ಗೆ ಬಿಜೆಪಿ ಕ್ರಮವಿಲ್ಲ, ಐ.ಎನ್.ಡಿ.ಐ.ಎ. ಮೌನ : ಮಾಯಾವತಿ ತರಾಟೆ

ಲಖ್ನೌ, ಆ. 23 - ಪರಿಶಿಷ್ಟರಲ್ಲಿ ಒಳ ಮೀಸಲಾತಿ ಹಾಗೂ ಕೆನೆಪದರಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಬಿಜೆಪಿ ಪರಿಶಿಷ್ಟರ ವಿರೋಧಿ ನಿಲುವು ತಳೆದಿದೆ ಎಂದು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಆರೋಪಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಾಯಾವತಿ, ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ. ಒಳಮೀಸಲಾತಿ ಬಗ್ಗೆ ಮೌನವಾಗಿದೆ ಎಂದು ಆಕ್ಷೇಪಿಸಿದ್ದಾರೆ.

ರಾಜ್ಯಗಳಿಗೆ ಒಳಮೀಸಲಾತಿ ಕಲ್ಪಿಸುವ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಪರಿಶಿಷ್ಟರಲ್ಲೂ ಕೆನೆಪದರ ಗುರುತಿಸಬೇಕು ಎಂದು ಇದೇ ತೀರ್ಪಿನಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿತ್ತು.

ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿ ಜನರ ಆಶಯ ಇದೆ. ಈ ಬಗ್ಗೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದು ವಿಷಾದಕರ ಹಾಗೂ ಚಿಂತೆಗೀಡು ಮಾಡುವಂಥದ್ದಾಗಿದೆ ಎಂದು ಮಾಯಾವತಿ ಹೇಳಿದ್ದಾರೆ.

ಹಳೆಯ ಮೀಸಲಾತಿ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಯಾವುದೇ ಸ್ಪಷ್ಟ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ವಿಷಯದ ಬಗ್ಗೆ ಸರ್ಕಾರ ಗಂಭೀರವಾಗಿಲ್ಲ ಎಂದವರು ಆರೋಪಿಸಿದ್ದಾರೆ.



ಮೊದಲು ನ್ಯಾಯಾಲಯದಲ್ಲಿ ದುರ್ಬಲ ವಾದ ಮಂಡಿಸಲಾಯಿತು. ಈಗ ಪರಿಶಿಷ್ಟರ ಮೀಸಲಾತಿಯನ್ನು ಯಥಾಸ್ಥಿತಿಯಲ್ಲಿರಿಸುವ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿ ಮಸೂದೆ ಮಂಡಿಸಲು ಸರ್ಕಾರ ಮುಂದಾಗಿಲ್ಲ ಎಂದು ಮಾಯಾವತಿ ಹೇಳಿದರು.

ಪ್ರತಿಪಕ್ಷಗಳು ಅದರಲ್ಲೂ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳು ಈ ಬಗ್ಗೆ ಮೌನವಾಗಿವೆ. ಐ.ಎನ್.ಡಿ.ಐ.ಎ. ಮೈತ್ರಿಕೂಟದ ನಿಲುವೂ ಆಘಾತಕಾರಿಯಾಗಿದೆ. ಅವರು ಪರಿಶಿಷ್ಟರ ಕಲ್ಯಾಣ ಹಾಗೂ ಅಭಿವೃದ್ಧಿಗೆ ಆಸಕ್ತರಾಗಿಲ್ಲ ಎಂದು ಮಾಯಾವತಿ ಆರೋಪಿಸಿದ್ದಾರೆ. (5ನೇ ಪುಟಕ್ಕೆ)

## ಮುಡಾದಲ್ಲಿ ಬದಲಿ ಜಮೀನು ಕೇಳಲಾಗಿತ್ತು

ಬೆಂಗಳೂರು, ಆ. 23 – ಮುಡಾದಿಂದ ತಮಗೆ ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ, ಇಲ್ಲವೇ 40:60ರ ಅನುಪಾತದಲ್ಲಿ ನಿವೇಶನ ನೀಡುವ ಮುಡಾ ಪ್ರಸ್ತಾವನೆ ನಿರಾಕರಿಸಿ, ತಮಗೆ ಬದಲಿ ಜಮೀನನ್ನೇ ನೀಡುವಂತೆ ಕೇಳಲಾಗಿತ್ತು ಎಂದು ಹೇಳಿರುವ ಕೇಂದ್ರ ಸಚಿವ ಕುಮಾರಸ್ವಾಮಿ, ಈ ಬಗ್ಗೆ ದಾಖಲೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ದಾಖಲೆಯನ್ನು ಟ್ವೀಟ್ ಮಾಡಿರುವ ಕುಮಾರಸ್ವಾಮಿ, ಮುಡಾ ಹಗರಣದಲ್ಲಿ ತಮ್ಮ ಹಾಗೂ ತಮ್ಮ ಕುಟುಂಬದ ಪಾತ್ರವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದರು. ಆದರೆ, ಅವರೇ ಬದಲಿ ಜಮೀನು ಕೇಳಿದ್ದಾರೆ ಎಂದರು.



**ದಾಖಲೆ ಟ್ವೀಟ್ ಮಾಡಿದ ಹೆಚ್ಡಿಕೆ**

ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ ಅಥವಾ 40:60ರ ಅನುಪಾತದಲ್ಲಿ ನಿವೇಶನ ನೀಡುವ ಮುಡಾ ಪ್ರಸ್ತಾವನೆ ನಿರಾಕರಿಸಿ, ಬದಲಿ ಜಮೀನನ್ನೇ ನೀಡುವಂತೆ ಒತ್ತಾಯ ಮಾಡಿರುವ (5ನೇ ಪುಟಕ್ಕೆ)

### ಸ್ಥಾನಿಕ ವೈದ್ಯರ ಶಿಷ್ಯವೇತನ ಶೇ.25ರಷ್ಟು ಹೆಚ್ಚಳ

ಬೆಂಗಳೂರು, ಆ. 23 - ಹಿರಿಯ ಸ್ಥಾನಿಕ ವೈದ್ಯರು ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಶಿಷ್ಯ ವೇತನವನ್ನು ಶೇ. 25 ರಷ್ಟು ಹೆಚ್ಚಿಸಲಾಗಿದೆ. ಕರ್ನಾಟಕ ವೈದ್ಯಕೀಯ ಶಿಕ್ಷಣ ಇಲಾಖೆ ಶುಕ್ರವಾರ ಈ ಬಗ್ಗೆ ಆದೇಶ ಹೊರಡಿಸಿದೆ.

ಇಲ್ಲಿನ ಸ್ಥಾನಿಕ ವೈದ್ಯರು 15-20 ದಿನಗಳಿಂದ ಹೋರಾಟ ನಡೆಸುತ್ತಿದ್ದರು. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಮಧ್ಯಪ್ರವೇಶಿಸಿದ ನಂತರ ಸ್ಥಾನಿಕ ವೈದ್ಯರು ಮುಷ್ಕರವನ್ನು ಹಿಂತೆಗೆದುಕೊಂಡರು. ಸಚಿವರು ತಮ್ಮ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಶಿಷ್ಯವೇತನ ಹೆಚ್ಚಿಸಿ ಆದೇಶ ಹೊರಡಿಸುವಂತೆ ಸೂಚನೆ ನೀಡಿದ್ದಾರೆ. ಪರಿಷ್ಕೃತ ಶಿಷ್ಯವೇತನ ಆಗಸ್ಟ್ 1 ರಿಂದ ಅನ್ವಯವಾಗಲಿದೆ ಎಂದು ಸಚಿವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಷೇರು ಮಾರುಕಟ್ಟೆಯಿಂದ ಅನಿಲ್ ಅಂಬಾನಿಗೆ ನಿರ್ಬಂಧ

### ರಿಲೈಯನ್ಸ್ ಹೋಂ ಫೈನಾನ್ಸ್ ಸಾಲ ವಂಚನೆಗೆ ಸಂಬಂಧಿಸಿದಂತೆ ಕ್ರಮ

ನವದೆಹಲಿ, ಆ. 23 - ಮುಂದಿನ ಐದು ವರ್ಷಗಳವರೆಗೆ ಉದ್ಯಮಿ ಅನಿಲ್ ಅಂಬಾನಿ ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸದಂತೆ ಮಾರುಕಟ್ಟೆ ನಿಯಂತ್ರಕ ಸೆಬಿ ನಿರ್ಬಂಧಿಸಿದೆ. ಕಂಪನಿಯಿಂದ ಹಣ ನಿಯಮಬಾಹಿರವಾಗಿ ವರ್ಗಾಯಿಸಿದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಅಂಬಾನಿಗೆ ಸೆಬಿ 25 ಕೋಟಿ ರೂ.ಗಳ ದಂಡವನ್ನೂ ವಿಧಿಸಿದೆ. ಅಂಬಾನಿ ಅಲ್ಲದೇ,



ರಿಲೈಯನ್ಸ್ ಹೋಂ ಫೈನಾನ್ಸ್‌ನ (ಆರ್‌ಹೆಚ್‌ಎ ಫ್‌ಎಲ್) ಪ್ರಮುಖ ಅಧಿಕಾರಿಗಳೂ ಸೇರಿದಂತೆ 24 ಜನರು ಷೇರುಪೇಟೆಯಿಂದ ದೂರವಿ ಬೇಕು ಎಂದು ನಿರ್ಬಂಧಿಸಲಾಗಿದೆ.

ರಿಲೈಯನ್ಸ್ ಹೋಂ ಫೈನಾನ್ಸ್ ಮೇಲೆ ಮುಂದಿನ ಆರು ತಿಂಗಳವರೆಗೆ ಷೇರುಪೇಟೆಯಿಂದ ನಿಷೇಧ ಹೇರಲಾಗಿದೆ ಹಾಗೂ 6 ಲಕ್ಷ ರೂ.ಗಳ ದಂಡವನ್ನೂ ವಿಧಿಸಲಾಗಿದೆ.

ರಿಲೈಯನ್ಸ್ ಹೋಂ ಫೈನಾನ್ಸ್ (5ನೇ ಪುಟಕ್ಕೆ)

### ಸೂಳೆಕೆರೆ ಬಳಿ 52 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು

ಬೆಂಗಳೂರು, ಆ. 23 – ದಾವಣಗೆರೆ ಜಿಲ್ಲೆಯ ಸೂಳೆಕೆರೆ ಬಳಿಯ ಶೃಂಗಾರಬಾಗ್ ಮೀಸಲು ಅರಣ್ಯದಲ್ಲಿ 52 ಎಕರೆ ಭೂಮಿ ಒತ್ತುವರಿಯನ್ನು ಅರಣ್ಯ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಶೃಂಗಾರಭಾಗ್ ಗಸ್ತಿನ ಶೃಂಗಾರಬಾಗ್ ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಒಟ್ಟು 52 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲಾಯಿತು ಎಂದು ತಿಳಿಸಿದ್ದಾರೆ.

ಶೃಂಗಾರಬಾಗ್ ಹಾಗೂ ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶ ಒತ್ತುವರಿ ಆಗಿತ್ತು. 17 ಜನರಿಗೆ ನೋಟಿಸ್ ನೀಡಿದ್ದು, ಒತ್ತುವರಿದಾರರು ಎಸಿಎಫ್ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಒತ್ತುವರಿಗೆ ಸಂಬಂಧಿಸಿ ದಾಖಲೆಗಳನ್ನು ಹಾಜರುಪಡಿಸಲಿಲ್ಲ. ಈ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ತೆರವಿಗೆ ಆದೇಶ ನೀಡಲಾಗಿದೆ. ನಂತರ ಅರಣ್ಯ ಇಲಾಖೆ ಅಧಿಕಾರಿಗಳು ಒತ್ತುವರಿ ತೆರವುಗೊಳಿಸಿದ್ದಾರೆ.

### ಸಕ್ಕರೆ ನಿಯಮ ಬದಲಿಗೆ ನಿರ್ಧಾರ

ನವದೆಹಲಿ, ಆ. 23 - 6 ದಶಕಗಳ ಹಳೆಯ ಸಕ್ಕರೆ ಉತ್ಪಾದನೆ ಹಾಗೂ ಬೆಲೆಗೆ ಸಂಬಂಧಿಸಿದ ನಿಯಂತ್ರಣವನ್ನು ಬದಲಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕೇಂದ್ರ ಗ್ರಾಹಕರ ವ್ಯವಹಾರ ಗಳ ಸಚಿವಾಲಯ ಸಕ್ಕರೆ ನಿಯಂತ್ರಣ ನಿಯಮಗಳ ಕುರಿತ ಕರಡನ್ನು ಬಿಡುಗಡೆ ಮಾಡಿದೆ. ಸಕ್ಕರೆ ವಲಯದಲ್ಲಿ ಆಗಿರುವ ಬದಲಾವಣೆಗಳನ್ನು ಪರಿಗಣಿಸಿ ಹೊಸ ನಿಯಮಗಳನ್ನು ಜಾರಿಗೆ ತರಲಾಗುತ್ತಿದೆ. ಈ ಕರಡಿಗೆ ಸಂಬಂಧಿಸಿದಂತೆ ಸೆ. 23ರ ಒಳಗೆ ಸಲಹೆಗಳನ್ನು ನೀಡಬಹುದು ಎಂದು ತಿಳಿಸಲಾಗಿದೆ.

### ಬಂದ್‌ಗೆ ಕರೆ ನೀಡದಂತೆ ನಿರ್ಬಂಧ

ಮುಂಬೈ, ಆ. 23 - ರಾಜಕೀಯ ಪಕ್ಷಗಳು ಇಲ್ಲವೇ ವ್ಯಕ್ತಿಗಳು ಮಹಾರಾಷ್ಟ್ರ ಬಂದ್‌ಗೆ ಕರೆ ನೀಡದಂತೆ ಬಾಂಬೆ ಹೈಕೋರ್ಟ್ ನಿರ್ಬಂಧಿಸಿದೆ. ಮಹಾರಾಷ್ಟ್ರದ ವಿರೋಧ ಪಕ್ಷಗಳ ಒಕ್ಕೂಟವಾದ ಮಹಾವಿಕಾಸ್ ಅಗಾಡಿ ಆಗಸ್ಟ್ 24ರಂದು ರಾಜ್ಯ ಬಂದ್‌ಗೆ ಕರೆ ನೀಡಿತ್ತು. ಠಾಣೆ ಜಿಲ್ಲೆಯ ಬದ್ಲಾಪುರದ ಶಾಲೆಯಲ್ಲಿ ಇಬ್ಬರು ಬಾಲಕಿಯರ ಮೇಲೆ ನಡೆದ ಲೈಂಗಿಕ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂದ್‌ಗೆ ಕರೆ ನೀಡಲಾಗಿತ್ತು.

### ಜಾತಿ ಆಧಾರದ ಅವಮಾನದಿಂದ ಜಾತಿ ನಿಂದನೆ ಕಾಯ್ದೆ ಅನ್ವಯ



ನವದೆಹಲಿ, ಆ. 23 – ದೂರು ನೀಡಿದ ವ್ಯಕ್ತಿ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಎಂಬ ಏಕೈಕ ಕಾರಣಕ್ಕಾಗಿ ಜಾತಿ ನಿಂದನೆ ಕಾಯ್ದೆ ಅನ್ವಯವಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ಮರುಂದನ್ ಮಲಯಾಳಿ ಎಂಬ ಯೂಟ್ಯೂಬ್ ಚಾನಲ್ ನಿರ್ವಹಿಸುವ ಶಜನ್ ಸ್ಕರಿಯಾ ಎಂಬುವವರು ದಾಖಲಿಸಿದ್ದ ನಿರೀಕ್ಷಣ ಜಾಮೀನು ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಶಾಸಕ ಪಿ.ವಿ. ಶ್ರೀನಿಜಿನ್ ಅವರು ಸ್ಕರಿಯ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿತ್ತು. ನಂತರ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಅವಮಾನ ಇಲ್ಲವೇ ಬೆದರಿಕೆಗೆ ಗುರಿಯಾದ ವ್ಯಕ್ತಿ ಪರಿಶಿಷ್ಟ ಜಾತಿ ಇಲ್ಲವೇ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂಬ ಏಕೈಕ ಕಾರಣಕ್ಕಾಗಿ ಜಾತಿ ನಿಂದನೆ ಕಾಯ್ದೆ ಅನ್ವಯವಾಗುವುದಿಲ್ಲ. ಸಂಬಂಧಿಸಿದ ವ್ಯಕ್ತಿಯ ಜಾತಿಯನ್ನು ಆಧಾರವಾಗಿಟ್ಟುಕೊಂಡು ಅವಮಾನಕ್ಕೆ ಗುರಿಪಡಿಸಲಾಗಿದೆ ಎಂದಾಗ ಮಾತ್ರ ಈ ಕಾಯ್ದೆ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಮಧ್ಯಕರ್ನಾಟಕದ ಪವಿತ್ರ ಸುಕ್ಷೇತ್ರವಾಗಿ ಬೆಳೆದಿರುವ 'ಉಕ್ಕಡಗಾತ್ರಿ'

ಮಲೇಬೆನ್ನೂರು, ಆ.23- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ದೇವಸ್ಥಾನದ ಟ್ರಸ್ಟ್ ವತಿಯಿಂದ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜು ಆರಂಭಿಸಲು ಯೋಜನೆ ರೂಪಿಸಿ ಎಂದು ಹಳೇಬೀಡು ಪುಷ್ಪಗಿರಿ ಮಹಾ ಸಂಸ್ಥಾನದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಟ್ರಸ್ಟ್ ಪದಾಧಿಕಾರಿಗಳಿಗೆ ಸಲಹೆ ನೀಡಿದರು.

ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಇಂದು ಹಮ್ಮಿಕೊಂಡಿದ್ದ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಯ ನೂತನ ಅಭಿವೃದ್ಧಿ ಕಟ್ಟಡಗಳ ಲೋಕಾರ್ಪಣೆ ಹಾಗೂ ಸರ್ವ ಧರ್ಮ ಸಾಮೂಹಿಕ ವಿವಾಹ ಮಹೋತ್ಸವ ಸಮಾರಂಭದ ದಿವ್ಯ ನೇತೃತ್ವ ವಹಿಸಿ, ಆಶೀರ್ವಚನ ನೀಡಿದರು.

ಭಕ್ತರು ನೀಡಿದ ಕಾಣಿಕೆ ಹಣದಲ್ಲೇ ಭಕ್ತರಿಗಾಗಿ ಸಾಕಷ್ಟು ಸವಲತ್ತುಗಳನ್ನು ಒದಗಿಸುತ್ತಾ ಬಂದಿರುವ ಟ್ರಸ್ಟ್ ಕಮಿಟಿಯವರು,




ಈ ಭಾಗದ ಜನರಿಗಾಗಿ ಕೂಡಲೇ ಉಚಿತ ಅಂಬುಲೆನ್ಸ್ ಸೇವೆ ಆರಂಭಿಸಬೇಕೆಂದು ಸ್ವಾಮೀಜಿ ಹೇಳಿದರು.

ಮಠ - ಮಂದಿರಗಳಿಗೆ ಭಕ್ತರೇ ಆಸ್ತಿಯಾಗಿದ್ದು, ಉಕ್ಕಡಗಾತ್ರಿಗೆ ಭಕ್ತರು ಮತ್ತು ತುಂಗಾಭದ್ರೆಯಿಂದ ಬಲ ಬಂದಿದ್ದು, ಸುಕ್ಷೇತ್ರವಾಗಿ ಬೆಳೆಯಲು ಅಜ್ಜಯ್ಯನ ಪವಾಡಗಳು ಕಾರಣವಾಗಿವೆ.

'ನಾನು' ಎಂಬ ಅಹಂಕಾರ ತೊರೆದು, 'ನಾವು' ಎಂಬ ಭಾವನೆ ಬೆಳೆಸಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಗುರುವಿಗೆ ನಿಜವಾದ ಭಕ್ತಿಯನ್ನು ಅರ್ಪಿಸಿದಾಗ ಸಂಕಷ್ಟಗಳ ನಿವಾರಣೆ ಸಾಧ್ಯ ಎಂದು ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶ್ರೀ ಆದಿಯೋಗಿ ಶಿವ ಶಿಲಾಮೂರ್ತಿ ಉದ್ಘಾಟಿಸಿದ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಯೋಗಿ, ತಪಸ್ವಿ, ತ್ರಿಕಾಲ ಲಿಂಗ ಪೂಜಾ ನಿಷ್ಠವಾದ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನವರಿಂದಾಗಿ ಉಕ್ಕಡಗಾತ್ರಿ ಪಾಪಮುಕ್ತ ಹಾಗೂ ಅವಿಮುಕ್ತ ಮತ್ತು ಮಧ್ಯಕರ್ನಾಟಕದ ಸುಕ್ಷೇತ್ರವಾಗಿ ಬೆಳೆದಿದೆ ಎಂದರು.

### ವಿವಿಧ ಕಟ್ಟಡಗಳ ಲೋಕಾರ್ಪಣೆಯಲ್ಲಿ ಶ್ರೀ ವಚನಾನಂದ ಸ್ವಾಮೀಜಿ ಅಭಿಮತ

ಕ್ಷೇತ್ರಕ್ಕೆ ಬರುವ ಭಕ್ತರು ನಿಮ್ಮ ಮನಸ್ಸಿನ ಮೈಲಿಗೆಯನ್ನು ಬಿಟ್ಟು ಹೋಗಬೇಕೇ ಹೊರತು ನಿಮ್ಮ ಹಳೆಯ ಬಟ್ಟೆಗಳನ್ನಲ್ಲ ಎಂದು ವಚನಾನಂದ ಸ್ವಾಮೀಜಿ ಹೇಳಿದರು.

ಮಡಿವಾಳ ಮಾಚಿದೇವ ಗುರುಪೀಠದ ಮಾಚಿದೇವ ಸ್ವಾಮೀಜಿ, ಗುಬ್ಬಿ ತಾ. ಬೆಟ್ಟದಹಳ್ಳಿ ಗವಿಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಕೊಡಿಯಾಲ ಹೊಸಪೇಟೆಯ ಪುಣ್ಯ ಕೋಟಿ ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಮಾತನಾಡಿದರು.

ಆದಿಚುಂಚನಗಿರಿ ಕ್ಷೇತ್ರದ ಶಿವಮೊಗ್ಗ ಶಾಖಾಮಠದ ಶ್ರೀ ಸಾಯಿನಾಥ ಸ್ವಾಮೀಜಿ ಮಾತನಾಡಿ, ಪಾಪಗಳ ನಿವಾರಣಾ ಕೇಂದ್ರವಾಗಿರುವ ಉಕ್ಕಡಗಾತ್ರಿಗೆ ಬಂದು ಅಜ್ಜಯ್ಯನ ಗದ್ದಿಗೆ ದರ್ಶನ ಮಾಡಿದರೆ, ಪಾಪಗಳು ದೂರವಾಗಿ ಪುಣ್ಯ ಪ್ರಾಪ್ತಿ ಆಗುತ್ತದೆ ಎಂದರು.

ಯಲವಟ್ಟಿ ಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ (5ನೇ ಪುಟಕ್ಕೆ)

# ನಮ್ಮ ರಾಜ್ಯದ ನಗರಾಭಿವೃದ್ಧಿ : ನಮ್ಮ ಸರ್ಕಾರದ ಗ್ಯಾರಂಟಿ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರ ದೂರದೃಷ್ಟಿಯ ನಾಯಕತ್ವದ ಕರ್ನಾಟಕ ಸರ್ಕಾರವು ರಾಜ್ಯದ ಗ್ರಾಮೀಣ ಹಾಗೂ ನಗರಗಳ ಜನತೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕೌಟುಂಬಿಕ, ವ್ಯವಹಾರಿಕ ಮತ್ತು ಕೃಷಿ ಅಗತ್ಯಗಳನ್ನು ಪರಿಹರಿಸಲು ವಿವಿಧ ಭಾಗ್ಯ ಯೋಜನೆಗಳನ್ನು ಜಾರಿಗೊಳಿಸಿ ಯಶಸ್ಸುಗೊಳಿಸಿದೆ.

ನಗರಗಳಲ್ಲಿ ವಾಸಿಸುವ ನಾನಾ ಸ್ತರಗಳ ಜನರನ್ನು ಸಬಲೀಕರಣಗೊಳಿಸುವ ಮೂಲಕ ಕರ್ನಾಟಕದಾದ್ಯಂತ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ವಿವಿಧ ನಗರಾಭಿವೃದ್ಧಿ ಯೋಜನೆಗಳನ್ನು ನಿಖರವಾಗಿ ವಿನ್ಯಾಸಗೊಳಿಸಲಾಗಿದೆ.



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

**ಕಾವೇರಿ ನೀರು :** ಜೈಕಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಸರಬರಾಜು ಯೋಜನೆ 5ನೇ ಹಂತದ ಯೋಜನೆಗೆ ರೂ.5550.00 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ.

**ಬಿಬಿಎಂಪಿ**ಯ 110 ಗ್ರಾಮಗಳ 225 ಚ.ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿರುವ 12 ಲಕ್ಷ ನಿವಾಸಿಗಳಿಗೆ ಯೋಜನೆಯು ಪೂರ್ಣಗೊಂಡ ನಂತರ ಪ್ರಯೋಜನೆಯಾಗಲಿದೆ.

**ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ 4)** ಯನ್ನು ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ, ಪ್ರಸ್ತುತ 307 ನಗರ ಸ್ಥಳೀಯ ಸಂಸ್ಥೆಗಳಲ್ಲಿ 2024-25ನೇ ಸಾಲಿನವರೆಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**ಇಂದಿರಾ ಕ್ಯಾಂಟಿನ್:** ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪರಿಸರದಲ್ಲಿ ಕೆಲಸ ನಿರ್ವಹಿಸುವ ವಾಹನ ಚಾಲಕರು, ಕಾರ್ಮಿಕರು ಹಾಗೂ ಇತರ ಬಡ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎರಡು ಇಂದಿರಾ ಕ್ಯಾಂಟಿನ್ ಗಳನ್ನು ಉದ್ಘಾಟಿಸಲಾಗಿದೆ.

**ರಸ್ತೆಯ ವಿಸ್ತರಣೆ:** ಬೆಂಗಳೂರಿನ ಹೊರವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್ ನಲ್ಲಿ ರಾಷ್ಟ್ರೀಯ ಹೆದ್ದಾರಿ-44 ರಲ್ಲಿ ಹಾಲಿ ಮೇಲುಸೇತುವೆಯ ಅಗಲೀಕರಣದ ಕಾಮಗಾರಿಯನ್ನು ಭಾಗಶಃ ಎರಡು/ನಾಲ್ಕು/ಮೂರು ಪಥದ ರಸ್ತೆಯಾಗಿ ವಿಸ್ತರಣೆ.

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು




ನುಡಿದಂತೆ ನಡೆದಿದ್ದೇವೆ...

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg — 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000



**ಕರ್ನಾಟಕದ ಯೋಜನೆಗಳು, ಸಾಮಾಜಿಕ-ಆರ್ಥಿಕವಾಗಿ ಸರ್ವ ನಾಗರಿಕರನ್ನು ಮೇಲಕ್ಕೆತ್ತುವ ಗುರಿ ಹೊಂದಿವೆ**

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಬಾಹ್ಯಾಕಾಶದಲ್ಲಿ ಭಾರತದ ಸಾಧನೆ ವಿಶ್ವಕ್ಕೆ ಮಾದರಿ



'ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯಲ್ಲಿ ಇಸ್ರೋ ಹಿರಿಯ ನಿವೃತ್ತ ನಿರ್ದೇಶಕ ಡಾ. ಹೆಚ್.ಡಿ ಆನಂದ್

ದಾವಣಗೆರೆ, ಆ. 23- ಬಾಹ್ಯಕಾಶ ಕ್ಷೇತ್ರದಲ್ಲಿನ ಭಾರತದ ಸಾಧನೆ ವಿಶ್ವಕ್ಕೆ ಮಾದರಿ. ಇಸ್ರೋದ ಬಹುತೇಕ ಸಾಧನೆಗಳು ಭಾರತದ ಕೀರ್ತಿಯನ್ನು ಹೆಚ್ಚಿಸಿವೆ ಎಂದು ಇಸ್ರೋದ ನಿವೃತ್ತ ಹಿರಿಯ ನಿರ್ದೇಶಕ ಡಾ. ಹೆಚ್.ಡಿ. ಆನಂದ್ ಹೇಳಿದರು.

ನಗರದ ಶ್ರೀ ತರಳಬಾಳು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಬೆಂಗಳೂರು, ಜಿಲ್ಲಾ ಪಂಚಾಯತ್ ದಾವಣಗೆರೆ ಇವರ ಸಹಯೋಗದಲ್ಲಿ ಚಂದ್ರಯಾನ-3 ಮಿಷನ್ ಚಂದ್ರನ ಅಂಗಳದಲ್ಲಿ ಯಶಸ್ವಿಯಾಗಿ ಇಳಿದ ದಿನದ ಅಂಗವಾಗಿ ಏರ್ಪಡಿಸಿದ್ದ 'ರಾಷ್ಟ್ರೀಯ ಬಾಹ್ಯಾಕಾಶ ದಿನ-2024' ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯನ್ನು ಕೇಂದ್ರ ಸರ್ಕಾರ ಖಾಸಗೀಕರಣಗೊಳಿಸಿದ ನಂತರ ಭಾರತದ ವಿಜ್ಞಾನಿಗಳು ಬಾಹ್ಯಾ ಕಾಶ ಸಂಶೋಧನೆಗಳ ಮೇಲೆ ಹೆಚ್ಚು ನಿಗಾವಹಿಸಲು ಸಾಧ್ಯವಾಗಿದೆ ಎಂದರು.

ಖಾಸಗಿಯವರು ಮುಂದೆ ಬಂದರೆ ಮಾತ್ರ ಸಂವಹನ ಸ್ಯಾಟಲೈಟ್ ಗಳ ಉಡಾವಣೆ ಮಾಡಲಾಗುತ್ತದೆ. ಈ ಹಿಂದೆ ಒಂದು ಉಪಗ್ರಹ ಸಿದ್ಧಪಡಿಸಿ, ಉಡಾವಣೆ ಮಾಡಲು 800 ಕೋಟಿ ರೂ. ವೆಚ್ಚ ತಗುಲುತ್ತಿತ್ತು. ಉಡಾವಣೆಗೆ ಸಾರ್ವಜನಿಕರ ಹಣ ಬಳಕೆ ಮಾಡಲಾಗುತ್ತಿತ್ತು ಎಂದು ಹೇಳಿದರು.

ಇಸ್ರೋ ಮೊದಲಿನಂತೆ ಇಲ್ಲ. ಈ ಸಂಸ್ಥೆ ಖಾಸಗಿಯವರ ಸಂಶೋಧನೆಗಳಿಗೂ ಮುಕ್ತವಾಗಿದೆ. ಖಾಸಗೀಕರಣ ಮಾಡಿದ ನಂತರ ಇಸ್ರೋದ ಸಾಂಸ್ಥಿಕ ಸೌಲಭ್ಯಗಳನ್ನು ಬಳಸಿಕೊಂಡು ಖಾಸಗಿಯವರು ಸಹ ತಮ್ಮ ಉಪಗ್ರಹಗಳನ್ನು ಉಡಾವಣೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಖಾಸಗಿ ಸಹಭಾಗಿತ್ವ ಪ್ರಾರಂಭವಾದ ನಂತರ ಭಾರತದ ಎಲ್ಲಾ ಸ್ಯಾಟಲೈಟ್ ಗಳ ಮರು ನಾಮಕರಣ ಆಗಿದೆ. ಇಸ್ರೋ ಬೇರೆ ದೇಶಗಳ ಉಪಗ್ರಹಗಳ ಸಿದ್ಧಪಡಿಸುವಿಕೆ ಮತ್ತು ಉಡಾವಣೆಗೆ ನೆರವಾಗುತ್ತಿದೆ ಎಂದು ಹೇಳಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ನಡೆದು ಬಂದ ದಾರಿ ಮತ್ತು ವಿಜ್ಞಾನಿಗಳ ಸಾಧನೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಇಸ್ರೋದ ಸಾಧನೆಗಳು ದೇಶದ ಕೀರ್ತಿಯನ್ನು ಹೆಚ್ಚಿಸಿದ್ದು, ಕೇವಲ ಬಾಹ್ಯಾಕಾಶ ಸಂಶೋಧನೆಗೆ ಸೀಮಿತ ವಾಗಿದ್ದ ಇಸ್ರೋ ಇದೀಗ ಆರ್ಥಿಕವಾಗಿ ದೇಶವನ್ನು ಬಲಾಢ್ಯಗೊಳಿಸಲು ಮುಂದಾಗಿದೆ ಎಂದರು.

ತರಳಬಾಳು ಜಗದ್ಗುರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಹೆಚ್.ಎಸ್. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಎಂ.ಆರ್. ಜಗದೀಶ್, ತರಳಬಾಳು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಶ್ರೀಕುಮಾರ ಹಿಂಡಸಗಟ್ಟೆ, ಜಿಲ್ಲಾ ಪಂಚಾಯತಿ ಯೋಜನಾ ಸಹಾಯಕ ಎ.ಜೆ.ಆನಂದ್, ಶಿಕ್ಷಕ ವಾಗೀಶ ಪಂಡಿತಾರಾಧ್ಯ , ಆರ್. ಶರತ್ ಮತ್ತಿತರರು ಭಾಗವಹಿಸಿದ್ದರು.

# ಗರ್ಭಿಣಿ, ಬಾಣಂತಿಯರಿಗೆ ಅರಿವು ಮೂಡಿಸುವ ಕಾರ್ಯ ಹೆಚ್ಚಾಗಲಿ

## ತಾಯಿ-ಮಕ್ಕಳ ಆಸ್ಪತ್ರೆ ತಜ್ಞರು, ಸಿಬ್ಬಂದಿಗೆ ಆರೈಕೆ ಒಡನಾಡಿ ಪ್ರಶಂಸನಾ ಕಾರ್ಯಕ್ರಮದಲ್ಲಿ ಡಿಹೆಚ್‌ಓ ಡಾ.ಷಣ್ಮುಖಪ್ಪ



ದಾವಣಗೆರೆ, ಆ.23- ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕೆಲಸ ಶ್ಲಾಘನೀಯವಾದದ್ದು. ಈ ರೀತಿ ಕೆಲಸಗಳು ಮತ್ತಷ್ಟು ಹೆಚ್ಚಾಗಲಿ ಎಂದು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ ಆಶಿಸಿದರು.

ಯೋಸೈಡ್ ಸಂಸ್ಥೆಯಿಂದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಚಿಗಟೇರಿ ಜಿಲ್ಲಾ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ತಾಯಿ ಮತ್ತು ಮಕ್ಕಳ ತಜ್ಞರುಗಳು ಹಾಗೂ ಶುಶ್ರೂಕೆ ಕಾರ್ಯದಲ್ಲಿ ಭಾಗಿಯಾದ ಶುಶ್ರೂಷಾ ಅಧಿಕಾರಿಗಳು, ಆಪ್ತ ಸಮಾಲೋಚಕರಿಗೆ ಆರೈಕೆ ಒಡನಾಡಿ ಪ್ರಶಂಸನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಾಣಂತಿರು, ಗರ್ಭಿಣಿಯರು ಹಾಗೂ ಮಕ್ಕಳಿಗೆ ಆರೋಗ್ಯ ಇಲಾಖೆಯಿಂದ ನೀಡುವ ಸೌಲಭ್ಯ ಹಾಗೂ ಅರಿವು ಮೂಡಿಸುವುದು ಅದರಲ್ಲೂ ನಗರದ ಪ್ರತಿ ವಾರ್ಡ್‌ನಲ್ಲೂ ಒಂದು ದಿನ ವಿಶೇಷ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವುದು ಸಂತಸದ ವಿಚಾರ. ಇಂತಹ ಉತ್ತಮ ಕಾರ್ಯದಲ್ಲಿ ಭಾಗಿಯಾದವರಿಗೆ ಪ್ರಶಂಸನೆ ವ್ಯಕ್ತಪಡಿಸುವ ಕಾರ್ಯಕ್ರಮವೂ ಅರ್ಥಪೂರ್ಣವಾದದ್ದು ಎಂದರು.

ಚಿಗಟೇರಿ ಜಿಲ್ಲಾಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಕೇರ್ ಕಂಪ್ಯಾನಿಯನ್ ಪ್ರೋಗ್ರಾಂ ಅಡಿಯಲ್ಲಿ ಹೊಸ ಮೈಲುಗಲ್ಲು ಸಾಧಿಸಿದೆ. 2017 ರಿಂದ ಇಲ್ಲಿಯವರೆಗೆ 2,47,672 ಜನ ತಾಯಂದಿರು ಹಾಗೂ ಆರೈಕೆ ದಾರರಿಗೆ ಸ್ಫೂರ್ತಿ ನೀಡಿ, ಕುಟುಂಬಗಳ ಆರೋಗ್ಯ ಫಲಿತಾಂಶ ಸುಧಾರಿಸುವಲ್ಲಿ ಇಲ್ಲಿನ ಶುಶ್ರೂಷಕಿಯರು ಹಾಗೂ ಆಪ್ತ ಸಮಾಲೋಚಕರು ಪ್ರಮುಖ ಪಾತ್ರ ವಹಿಸಿದ್ದಾರೆ.

ಕೇರ್ ಕಂಪ್ಯಾನಿಯನ್ ಪ್ರೋಗ್ರಾಂ ಶುರುವಾಗಿದ್ದು, 2014 ರಲ್ಲಿ. ಆರಂಭ ವಿಶೇಷವಾಗಿ ಗರ್ಭಿಣಿಯ ಪೋಷಕರಿಗೆ ಹಾಗೂ ಕುಟುಂಬಸ್ಥರಿಗೆ ಪ್ರಸವಪೂರ್ವ, ಪ್ರಸವನಂತರ ಅನುಸರಿಸ ಬೇಕಾದ ಕ್ರಮಗಳ ಬಗ್ಗೆ ಹಾಗೂ ಮೂಢನಂಬಿಕೆ ಹೋಗಲಾಡಿಸಿ ಅವರಿಗೆ ತಿಳುವಳಿಕೆ ನೀಡುವ ಜೊತೆಗೆ ಮಕ್ಕಳ ಆರೈಕೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಶುಶ್ರೂಷಕಿಯರು ಹಾಗೂ ಸಮಾಲೋಚಕರು ಮಾಡಿದ್ದಾರೆ. ಅತಿ ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ಜನರಿಗೆ ಜಾಗೃತಿ ಮೂಡಿಸುವ ಅವರ ಕೆಲಸ ಪ್ರಶಂಸನೀಯ. ಇದೀಗ ಆರು ಜನ ಶುಶ್ರೂಷಕಿಯರು ಹಾಗೂ ಎರಡು ಜನ ಆಪ್ತ ಸಮಾ ಲೋಚಕರಿಗೆ ಆರೈಕೆ ಒಡನಾಡಿ ಪ್ರಶಂಸನಾ ಪತ್ರವನ್ನು ನೀಡಿ ಗೌರವಿಸಿದ್ದು ಸಂತೋಷ ತಂದಿದೆ ಎಂದರು.

ಜಿಲ್ಲಾ ಸರ್ಜನ್ ಡಾ.ನಾಗೇಂದ್ರ, ಜಿಲ್ಲಾ ಸರ್ವೇಕ್ಷ ಣಾಧಿಕಾರಿ ಡಾ.ರಾಘವನ್, ಆರ್‌ಸಿಹೆಚ್‌ಓ ರೇಣುಕಾ ರಾಧ್ಯ, ನಿವಾಸಿ ವೈದ್ಯಾಧಿಕಾರಿ ಡಾ.ನಾಗವೇಣಿ, ಶಾಂತಿ, ಕಾರ್ಯಕ್ರಮ ಸಂಯೋಜಕಿ ಪರ್ವಿನ್, ಜೀವಿತಾ, ಮಣಿಕಂಠ, ವರಲಕ್ಷ್ಮಿ ಇತರರು ಈ ಸಂದರ್ಭದಲ್ಲಿದ್ದರು.

# ಸಿಎಂ ಬೆಂಬಲಕ್ಕೆ ಹೈಕಮಾಂಡ್

**(3ನೇ ಪುಟದಿಂದ)** ಚರ್ಚಿಸಲಾಗಿದೆ. ಕೈಗೊಂಬೆಯಾಗಿರುವ ರಾಜ್ಯಪಾಲರ ಕಚೇರಿ ಬಳಸಿಕೊಂಡು ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಸಲಾಗುತ್ತಿರುವ ಬಗ್ಗೆ ಪಕ್ಷದ ನಾಯಕರಿಗೆ ತಿಳಿಸಲಾಗಿದೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿಯ ಇಡೀ ನಾಯಕತ್ವ ರಾಜ್ಯಪಾಲರ ಹಿಂದೆ ನಿಂತು ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಮೇಲೆ ದಾಳಿ ನಡೆಸುತ್ತಿದೆ ಎಂದವರು ಆರೋಪಿಸಿದರು.

ಇದು ಕಾಂಗ್ರೆಸ್ ಸರ್ಕಾರ ಅಸ್ಥಿರಗೊಳಿಸುವ ಇಲ್ಲವೇ ಪದಚ್ಯುತಗೊಳಿಸುವ ಪ್ರಯತ್ನವಲ್ಲ. ಪ್ರತಿ ವರ್ಷ ರಾಜ್ಯದ ಜನತೆಯ ಖಾತೆಗಳಿಗೆ 53 ಸಾವಿರ ಕೋಟಿ ರೂ. ಜಮಾ ಮಾಡುವ ಕಾಂಗ್ರೆಸ್‌ನ ಐದು ಗ್ಯಾರಂಟಿಗಳ ವಿರುದ್ಧ ದಾಳಿ ನಡೆಸುವ ದುಷ್ಟ ಸಂಚು ಎಂದು ಕಿಡಿಕಾರಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ನೀಡಲಾದ ಗ್ಯಾರಂಟಿಗಳ ವಿರುದ್ಧ ಬಿಜೆಪಿ ದಾಳಿ ನಡೆಸುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ಬಿಜೆಪಿ ಹಾಗೂ ಜೆಡಿಎಸ್ ಹೆದರಿವೆ. ಅಧಿಕಾರ ಮದದಿಂದ ಚುನಾಯಿತ ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಸುರ್ಜೇವಾಲ ಟೀಕಿಸಿದರು.

ಕಳೆದ ಐದಾರು ವರ್ಷಗಳಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಅಭಿಯೋಜನೆಗೆ ರಾಜ್ಯಪಾಲರು ಏಕೆ ಒಪ್ಪಿಗೆ ಕೊಟ್ಟಿಲ್ಲ? ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಬಿಜೆಪಿ ಮತ್ತು ಜೆಡಿಎಸ್ ನಾಯಕರ ವಿರುದ್ಧದ ಕ್ರಮಗಳಿಗೆ ಏಕೆ ಒಪ್ಪಿಗೆ ನೀಡಿಲ್ಲ? ಎಂದು ಅವರು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, ಕಾಂಗ್ರೆಸ್ ನಾಯಕತ್ವ ಹಾಗೂ ಪ್ರತಿಯೊಬ್ಬರು ಸಿದ್ದರಾಮಯ್ಯ ಹಿಂದೆ ದೃಢವಾಗಿ ನಿಂತಿದ್ದೇವೆ ಎಂದು ತಿಳಿಸಿದರು.

## ಸಿಎಂಗೆ ಮತ್ತೊಂದು ಸಮಸ್ಯೆ

**(3ನೇ ಪುಟದಿಂದ)** ವರದಿ ನೀಡಿತ್ತು.

ನಂತರದಲ್ಲಿ ರಮೇಶ್ ಅವರು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಕಳೆದ ಫೆಬ್ರವರಿಯಲ್ಲಿ ಲೋಕಾಯುಕ್ತರ ವರದಿಯನ್ನು ತಳ್ಳಿ ಹಾಕಿತ್ತು. ಹೊಸದಾಗಿ ಪ್ರಾಥಮಿಕ ತನಿಖೆ ನಡೆಸು ವಂತೆ ಲೋಕಾಯುಕ್ತ ಪೊಲೀಸರಿಗೆ ತಿಳಿಸಿತ್ತು. ಆರು ತಿಂಗಳಲ್ಲಿ ಹೊಸ ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿತ್ತು. ಆದರೆ, ಆರು ತಿಂಗಳಾದರೂ ಲೋಕಾ ಯುಕ್ತರು ಕ್ರಮ ತೆಗೆದುಕೊಂಡಿಲ್ಲ ಎಂದು ರಮೇಶ್ ಮತ್ತೆ ನ್ಯಾಯಾಲ ಯದಲ್ಲಿ ಅರ್ಜಿ ದಾಖಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಲೋಕಾ ಯುಕ್ತದ ತನಿಖಾ ಅಧಿಕಾರಿ ಗಳಿಗೆ ಕಾರಣ ಕೇಳಿ ನೋಟಿಸ್ ಕಳಿಸಿದೆ.

# ಮಹತ್ವ ಅರಿತರೆ ಬದುಕು ಸುಂದರ

**(3ನೇ ಪುಟದಿಂದ)** ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮಿಗಳು, ರೇಣುಕಾನಂದ ಸ್ವಾಮೀಜಿ, ರಾಘವೇಂದ್ರ ಸ್ವಾಮಿ ಮಠದ ವರಹಾಚಾರ್, ರಾಣೇಬೆನ್ನೂರು ಮಾಜಿ ಶಾಸಕ ಅರುಣ್ ಕುಮಾರ್ ಪೂಜಾರ್, ಧರ್ಮದರ್ಶಿ ಬಿ.ಸಿ. ಉಮಾಪತಿ, ಪಿ.ಡಿ. ಶಿರೂರು, ಪ್ರಕಾಶ್ ಪಾಟೀಲ್, ಪಟ್ಟಣ್ಣ ಶೆಟ್ಟಿ, ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಅಚ್ಚುತಗೌಡ, ವಸಂತ ಹುಲ್ಲತ್ತಿ, ರಶ್ಮಿನಾಗರಾಜ್ ಕುಂಕೊದ್ ದಾವಣಗೆರೆ, ಸುಷ್ಮ ಪ್ರಕಾಶ್ ಪಾಟೀಲ್, ಧನ್ಯಕುಮಾರ್, ಶ್ರೀನಿವಾಸ್ ರಡ್ಡಿ, ಮೂರ್ತಿಕಾರ್, ಗುತ್ತಿಗೆದಾರ ಶಿವಕುಮಾರ್, ಬಾದಾಮಿ ಜಯಣ್ಣ, ಪುರವಂತರ ಮಂಜುನಾಥ್, ಕರಿಬಸಪ್ಪ ಕಂಚಿಕೇರಿ ಹರಿಹರ, ನಿಂಗರಾಜ್ ದೇವರಬೆಳಕೆರೆ, ಬಾತಿ ರಾಜಣ್ಣ, ಬಂಕಾಪುರ ಶಿವಣ್ಣ, ರೂಪಾ ಕುರವತ್ತಿ, ಗೀತಾ ಕಾಕೋಳ ರಾಣೇಬೆನ್ನೂರು, ಕೋಟೆ ಗದ್ದೆ ರವಿಕುಮಾರ್, ವೀಣಾ ಬೆಳ್ಳೂಡಿ, ವಿಣಾ ಪ್ರಸಾದ್, ಶ್ರೀಶೈಲ, ನಿರಂಜನ್ ದೀಟೂರು , ಚಂದ್ರು ಹೊನ್ನಾಳಿ, ಕೊಟ್ರೇಶ್ ಕೋಡಿಯಾಲ ಹೊಸಪೇಟೆ, ಇತರರು ಹಾಜರಿದ್ದರು

# ಬದಲಿ ಜಮೀನು ಕೇಳಲಾಗಿತ್ತು

**(3ನೇ ಪುಟದಿಂದ)** ದಾಖಲೆ ಯನ್ನು ಕೇಂದ್ರ ಸಚಿವರು ಬಿಡುಗಡೆ ಮಾಡಿದ್ದಾರೆ.

50:50ರ ಅನುಪಾತದಲ್ಲಿ ಮುಡಾ ಬದಲಿ ನಿವೇಶನ ನೀಡಲೇಬೇಕು ಎಂದು ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಮ್ಮ ಒತ್ತಾಯ ಮಾಡಿದ್ದಾರೆ, ಅಲ್ಲದೆ, ಅರ್ಜಿದಾರರಾದ ಪಾರ್ವತಮ್ಮ ಅವರಿಗೆ ಮಾರುಕಟ್ಟೆ ದರದಲ್ಲಿ ಜಮೀನಿನ ಪರಿಹಾರ ನೀಡುವುದಾಗಿಯೂ ಅಥವಾ 40:60ರ ಅನುಪಾತದಲ್ಲಿ ನಿವೇಶನ ನೀಡುವುದಾಗಿಯೂ ತಿಳಿಸಲಾಗಿತ್ತು. ಪ್ರಾಧಿಕಾರದ ಸಲಹೆಗೆ ಅವರು ಒಪ್ಪಿಗೆ ನೀಡದೇ ಇದ್ದು, ಬದಲಿ ಜಮೀನನ್ನೇ ನೀಡುವಂತೆ ಒತ್ತಾಯಿಸಿರುತ್ತಾರೆ. ಇದು ಮುಡಾ ದಾಖಲೆಯಲ್ಲಿನ ಟಿಪ್ಪಣಿ. ಇದಕ್ಕೆ ಸಿದ್ದರಾಮಯ್ಯ ಉತ್ತರಿಸಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಅವರೇ ಒತ್ತಾಯಿಸಿರುತ್ತಾರೆ ಎಂದರೆ ಮುಡಾ ಅಧಿಕಾರಿ ಗಳು ಇನ್ನೇನು ಮಾಡಲು ಸಾಧ್ಯ? ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

# ಅನಿಲ್ ಅಂಬಾನಿಗೆ ನಿರ್ಬಂಧ

**(3ನೇ ಪುಟದಿಂದ)** ಉನ್ನತ ಅಧಿಕಾರಿಗಳ ನೆರವಿನಿಂದ ಅನಿಲ್ ಅಂಬಾನಿ ವಂಚ ನಾತ್ಮಕ ಯೋಜನೆ ರೂಪಿಸಿ, ಸಾಲದ ರೂಪದಲ್ಲಿ ಹಣ ಪಡೆದಿದ್ದರು ಎಂದು ಸೆಬಿ ಹೇಳಿದೆ. ಈ ರೀತಿಯ ಸಾಲದ ಪದ್ಧತಿಯನ್ನು ನಿಲ್ಲಿಸುವಂತೆ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಿಗೆ ತಿಳಿಸಲಾಗಿತ್ತು. ಆದರೂ, ಈ ಆದೇಶಗಳನ್ನು ಕಡೆಗಣಿಸಲಾಗಿತ್ತು ಎಂದು ಸೆಬಿ ಹೇಳಿದೆ.

ಸಾಲ ನೀಡಿದ್ದರ ಹಿಂದೆ ದುರುದ್ದೇಶವಿದೆ. ಸಾಲ ಪಡೆದ ಹಲವರು ಆರ್‌ಹೆಚ್‌ಎಫ್‌ಎಲ್ ಪ್ರವರ್ತಕರ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಸಾಲ ಪಡೆದ ಬಹುತೇಕರು ಮರು ಪಾವತಿಸಿಲ್ಲ. ಇದರಿಂದಾಗಿ ಆರ್‌ಹೆಚ್‌ಎಫ್‌ಎಲ್ ಸಂಕಷ್ಟಕ್ಕೆ ಸಿಲುಕಿದೆ. ಸಾರ್ವಜನಿಕ ಹೂಡಿಕೆದಾರರು ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ.

2018ರಲ್ಲಿ ಆರ್‌ಹೆಚ್‌ಎಫ್‌ಎಲ್ ಷೇರುಗಳ ಬೆಲೆ 59.60 ರೂ. ಆಗಿತ್ತು. ಮಾರ್ಚ್ 2020ರ ವೇಳೆಗೆ ವಂಚನೆ ಪ್ರಮಾಣ ಸ್ಪಷ್ಟವಾಗುತ್ತಿದ್ದಂತೆ ಷೇರುಗಳ ಬೆಲೆ ಕೇವಲ 75 ಪೈಸೆಗೆ ಕುಸಿದಿದೆ. ಆರ್‌ಹೆಚ್‌ಎಫ್‌ಎಲ್‌ನಲ್ಲಿ ಈಗಲೂ 9 ಲಕ್ಷ ಹೂಡಿಕೆದಾರರಿದ್ದು, ಅವರು ಗಣನೀಯ ನಷ್ಟ ಅನುಭವಿಸಿದ್ದಾರೆ.


**ಚಿತ್ರದುರ್ಗದಲ್ಲಿ ವಾಸದ ಮನೆ ಮತ್ತು ನರ್ಸರಿ ಶಾಲೆ ಮಾರಾಟಕ್ಕಿದೆ**

ಚಿತ್ರದುರ್ಗದ ಬ್ಯಾಂಕ್ ಕಾಲೋನಿಗೆ ಲಗತ್ತಾಗಿರುವ ಸಾಮ್ರಾಜ್ಯ ಎಕ್ಸ್‌ಟೆನ್ಷನ್‌ನಲ್ಲಿ ಸ್ವಂತಕ್ಕೆ, ಉತ್ತರಾಭಿಮುಖ ಇರುವ ಸಂಪೂರ್ಣ ವಾಸ್ತು ಪ್ರಕಾರ ಕಟ್ಟಿಸಿರುವ ಮುಂದೆ 30 ಅಡಿ ರಸ್ತೆ, ಹಿಂದೆ 60 ಅಡಿ ರಸ್ತೆ, ಇರುವ 60x90 Sfqt ಅಳತೆಯ ಅಂದಾಜು 5400 ಅಡಿ ಇರುವ ಸೈಟಿನಲ್ಲಿ 4 ಬೆಡ್ ರೂಂನ ಡ್ಯೂಪ್ಲೆಕ್ಸ್, ಹಾಲಿ ವಾಸವಿರುವ ವಾಸದ 4 ವರ್ಷದ ಮನೆ ಮಾರಾಟಕ್ಕಿದೆ ಮತ್ತು ಲಗತ್ತಾಗಿ 120x80 ಅಂದಾಜು 9000 ಅಡಿ ಇರುವ ಸೈಟ್‌ನಲ್ಲಿ ಹಾಲಿ ನರ್ಸರಿ ಶಾಲೆ ಇರುವ ಆಸ್ತಿ ವಾಸದ ಮನೆ ಮತ್ತು ನರ್ಸರಿ ಶಾಲೆ ಬೇರೆ ಬೇರೆಯಾಗಿ ಮಾರಾಟಕ್ಕಿದೆ.

ಸಂಪರ್ಕಿಸಿ : ಮಧು - 94481 80019, 98447 11299, 87926 74819


# ನಗರದಲ್ಲಿ ಇಂದು ಗೀತೆಗಳ ಗಾಯನ ಸ್ಪರ್ಧೆ

ಕೆ.ಬಿ. ಬಡಾವಣೆಯ ಐಕ್ಯತಾ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಶಾಂತಿಪಾರ್ಕ್ ಸಭಾಂಗಣದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ಮಧ್ಯ ಕರ್ನಾಟಕದ ಧ್ವನಿ ಕರೋಕೆ ಗಾಯನ ಮೆಗಾ ಆಡಿಷನ್, ದೇಶಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ ಹಾಗೂ ಕನ್ನಡ ಮತ್ತು ಹಿಂದಿನ ಚಲನಚಿತ್ರ ಗೀತೆಗಳ ಗಾಯನ ಸ್ಪರ್ಧೆ, ಸಂಜೆ 6.30 ಕ್ಕೆ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕೆ.ಎಸ್.ಬಸವಂತಪ್ಪ, ಜಿ ಮಹಮದ್ ಸಮೀವುಲ್ಲಾ, ಬಿ.ಜಿ. ಅಜಯ್ ಕುಮಾರ್, ದೇವರಮನಿ ಶಿವಕುಮಾರ್, ಬಿ. ನಾಗಪ್ಪ, ಜಿ.ಎಸ್. ಶ್ಯಾಮ್, ಇಬ್ರಾಹಿಂ ಎ. ತಿಮ್ಮಾಪುರ, ಸುರೇಶ್ ರಾಯಭಾಗ್, ಸಾಧತ್, ಜೆ ಜೆ. ಅಮಾನುಲ್ಲಾಖಾನ್, ಟಾರ್ಗೆಟ್ ಅಸ್ಲಾಂ, ಪಿ. ಕುಮಾರ್, ವೀರೇಶ್ ಸವಣೂರು, ವಿ. ಸೋಮಶೇಖರ್, ಬಿ.ಎಂ.ಸಿ. ರಾಜು, ರವಿಕುಮಾರ್, ಡಾ.ಅನೀಸ್ ಅಹ್ಮದ್, ಫಾರೂಖ್, ವಿಜಯಣ್ಣ, ರಂಗಸ್ವಾಮಿ, ಅಹ್ಮದ್ ಶರೀಫ್, ಸಿದ್ದೇಶ್ ಪಾಮೇನಹಳ್ಳಿ, ಅಮೀರ್, ಕರಿಯಪ್ಪ ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ನಿವೃತ್ತ ನೌಕರರ ಸಭೆ

ಕರ್ನಾಟಕ ರಾಜ್ಯ ನಿವೃತ್ತ ನೌಕರರ ವೇದಿಕೆ ಇವರ ವತಿಯಿಂದ ಗುರುಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ರಾಜ್ಯಮಟ್ಟದ ನಿವೃತ್ತ ನೌಕರರ ಸಭೆ ನಡೆಯಲಿದೆ.

ನಿವೃತ್ತ ನೌಕರರಿಗೆ ಏಳನೇ ವೇತನ ಆಯೋಗದ ವರದಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಸರ್ಕಾರದ ಗಮನಸೆಳೆಯಲು ಹೋರಾಟ ಮಾಡುವ ಬಹುಮುಖ್ಯ ನಿರ್ಧಾರವನ್ನು ಈ ಸಭೆಯಲ್ಲಿ ಕೈಗೊಳ್ಳಲಾಗುವುದು.

ಸಭೆಯಲ್ಲಿ ವೇದಿಕೆ ರಾಜ್ಯ ಪ್ರಧಾನ ಸಂಚಾಲಕ ಎಂ.ಪಿ.ಎಂ. ಷಣ್ಮುಖಯ್ಯ, ರಾಜ್ಯ ಸಂಚಾಲಕ ಕೆ. ಶಿವಶಂಕರ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

# ಚನ್ನಗಿರಿಯಲ್ಲಿ ಇಂದು 'ಗ್ರಾಮೀಣ ಬದುಕು ಮತ್ತು ಕನ್ನಡ ಸಾಹಿತ್ಯ' ವಿಶೇಷ ಉಪನ್ಯಾಸ

ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ, ಕನ್ನಡ ಸಾಹಿತ್ಯ ಪರಿಷತ್ತು ಚನ್ನಗಿರಿ ಹಾಗೂ ಸರ್ಕಾರಿ ನೌಕರರ ಸಂಘ ಚನ್ನಗಿರಿ ಇವರ ಸಹಯೋಗದಲ್ಲಿ ಸರ್ಕಾರಿ ನೌಕರರ ಭವನದಲ್ಲಿ ಇಂದು ಬೆಳಿಗ್ಗೆ 10.30 ಗಂಟೆಗೆ 'ಗ್ರಾಮೀಣ ಬದುಕು ಮತ್ತು ಕನ್ನಡ ಸಾಹಿತ್ಯ' ಕುರಿತು ವಿಷಯಾಧಾರಿತವಾದ ಗ್ರಾಮ ಲೋಕ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯ ಚನ್ನಪ್ಪ ಅಂಗಡಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಚನ್ನಗಿರಿ ತಾಲ್ಲೂಕು ಕಸಾಪ ಅಧ್ಯಕ್ಷ ಬಸವಾಪಟ್ಟಣದ ಎಲ್.ಜಿ. ಮಧುಕುಮಾರ್ ವಹಿಸಲಿದ್ದಾರೆ. 'ಕನ್ನಡ ಸಾಹಿತ್ಯ ಮತ್ತು ಯುವ ಪೀಳಿಗೆ' ಎಂಬ ವಿಷಯದ ಬಗ್ಗೆ ಡಾ.ದಾದಾಪೀರ್ ನವಿಲೇಹಾಳ್, 'ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಸೊಗಡು' ಎಂಬ ವಿಷಯದ ಕುರಿತು ಗೀತಾ ಬಸವರಾಜ್, 'ಕನ್ನಡ ಸಾಹಿತ್ಯ ಮತ್ತು ಜನಪದ' ಎಂಬ ವಿಷಯದ ಕುರಿತು ಸಂತೆಬೆನ್ನೂರು ಫೈಜ್ನಟ್ರಾಜ್ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ಕೆ. ಶಶಿಧರ್, ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಯು. ಚನ್ನಬಸಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಎಂದು ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ತಿಳಿಸಿದ್ದಾರೆ.




# ಹರಿಹರಲ್ಲಿ ನಾಳೆ ಸಾಮೂಹಿಕ ವಿವಾಹ ಮಹೋತ್ಸವ

ಹರಿಹರ, ಆ. 23 - ನಗರದ ಲಾರಿ ಮಾಲೀಕರು ಮತ್ತು ಚಾಲಕರ ಸಂಘ ಹಾಗೂ ಮಿನ್ ಜಾಬಿಬ್ ಹಿಂದೂಸ್ಥಾನ ಟ್ರೇಡರ್, ಗ್ಯಾರೇಜ್ ಮತ್ತು ಸ್ಕರ್ಪಾ ಮರ್ಚೆಂಟ್ ವತಿಯಿಂದ ನಾಡಿದ್ದು ದಿನಾಂಕ 25 ರಂದು ಭಾನುವಾರ ಬೆಳಗ್ಗೆ 12.15ಕ್ಕೆ ಭಾಗೀರಥಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಮುಸ್ಲಿಂ ಸಮುದಾಯದ ಬಡವರಿಗೆ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಪ್ರಥಮ ಬಾರಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸೈಯದ್ ಯೂಸುಫ್ ಹಾಗೂ ಜಪಾನ್ ರಫೀಕ್ ಸಾಬ್ ಹೇಳಿದರು.

ನಗರದ ಕಾರ್ಯ ನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಮೌಲಾನ ಖಾಜಿ ಶಂಶುದ್ದಿನ್ ಸಾಬ್ ಬರಕಾತಿ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಶಾಸಕ ಎಸ್. ರಾಮಪ್ಪ, ಅಬು ಸೈಯದ್, ನಂದಿಗಾವಿ ಶ್ರೀನಿವಾಸ್, ತಹಶಿಲ್ದಾರ್ ಗುರು ಬಸವರಾಜ್, ಸಿಪಿಐ ಎಸ್ ದೇವಾನಂದ್, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಸೇರಿದಂತೆ ಇತರೆ ಗಣ್ಯರು ಭಾಗವಹಿಸಿದ್ದಾರೆ.


ಈ ಸಂದರ್ಭದಲ್ಲಿ ಜಕಾವುಲ್ಲಾ, ಖಲೀಲ್ ಸಾಬ್, ಶಶಿನಾಯ್ಕ್, ಸೈಯದ್ ಇಸ್ಮಾಯಿಲ್, ಮಹಬೂಬ್ ಸಾಬ್, ಸೈಯದ್ ಅಸ್ಲಾಂ, ಬಿಸ್ಮಿಲ್ ರಫಿಕ್, ಮಹಮ್ಮದ್ ರಫಿಕ್ ಇತರರು ಹಾಜರಿದ್ದರು.

# ನಗರದಲ್ಲಿಂದು ಯೋಧರು, ರೈತರಿಗೆ 'ರಕ್ಷಾಬಂಧನ'

ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ದಾವಣಗೆರೆ ಹಾಗೂ ಭಾವಸಿರಿ ಪ್ರಕಾಶನ ಅಣಬೇರು ಇವರ ಸಹಯೋಗದಲ್ಲಿ ಇಂದು ಸಂಜೆ 4.30 ಕ್ಕೆ ನಿಜಲಿಂಗಪ್ಪ ಬಡಾವಣೆಯ ಅಮರ್ ಜವಾನ್ ಉದ್ಯಾನವನದಲ್ಲಿ ವೀರ ಯೋಧರು, ರೈತರಿಗೆ ರಕ್ಷಾ ಬಂಧನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.


**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**

**Numero Astrologer & palmistry**



ವಂಶಾಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ವಶೀಕರಣ ಸ್ಪೆಷಾಲಿಸ್ಟ್. ನೀವು ಇಷ್ಟಪಟ್ಟವರು ನಿಮ್ಮಂತಾಗಲು

ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಕುಜ ದೋಷ ಮತ್ತು ನಾಗ ದೋಷ, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಮಾನಸಿಕ ಚಿಂತೆ, ಹೋಮ ಹವನದಿಂದ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 11 ದಿನದೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಬೇಟಿ ನೀಡಿ.

ಮನೆ ವಿಳಾಸ : ಪಂಡಿತ್. ಜಿ.ವಿ. ಭಟ್ಟರ್

ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ದಾವಣಗೆರೆ

ಮೊ : 89716 99826, 99644 84508


# ಮಧ್ಯಕರ್ನಾಟಕದ ಪವಿತ್ರ ಸುಕ್ಷೇತ್ರವಾಗಿ ಬೆಳೆದಿರುವ 'ಉಕ್ಕಡಗಾತ್ರಿ'

**(3ನೇ ಪುಟದಿಂದ)** ಸ್ವಾಮೀಜಿ ಮಾತನಾಡಿ, ತಮ್ಮ ಬದುಕಿನ ಸಾರ್ಥಕತೆಯನ್ನು ಭಕ್ತರಿಗಾಗಿ ಮೀಸಲಟ್ಟಿರುವ ಸಿದ್ಧಾರೂಢರು ಮತ್ತು ಕರಿಬಸವೇಶ್ವರ ಅಜ್ಜಯ್ಯನವರು ಜೀವಂತ ದೇವರಾಗಿದ್ದಾರೆ ಎಂದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು, ದಾಂಪತ್ಯ ಜೀವನ್ಕೆ ಕಾಲಿಟ್ಟ20 ಜೋಡಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ತುಮ್ಮಿನಕಟ್ಟೆ ಪದ್ಮಸಾಲಿ ಪೀಠದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಚಿಕ್ಕಮಗಳೂರು ತಾ. ಕರಡಿ ಗವಿಮಠದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ, ಅರಸೀಕೆರೆ ತಾ. ಕೋಳಗುಂದದ ಕೇದಿಗೆ ಮಠಾಧ್ಯಕ್ಷ ಶ್ರೀ ಜಯ ಚಂದ್ರಶೇಖರ ಸ್ವಾಮೀಜಿ, ಲಿಂದಹಳ್ಳಿ ಮಠದ ಶ್ರೀ ವೀರಭದ್ರ ಸ್ವಾಮೀಜಿ, ಯಳನಾಡು ಸಂಸ್ಥಾನದ ಶ್ರೀ ಜ್ಞಾನ ಪ್ರಭು ಸಿದ್ಧಾರಾಮ ದೇಶೀಕೇಂದ್ರ ಸ್ವಾಮೀಜಿ, ಗೋಡೆಕೆರೆ ಮಠದ ಶ್ರೀ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ, ರಟ್ಟಿಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ತಿಪಟೂರಿನ ಗುರುಕುಲಾನಂದ ಆಶ್ರಮದ ಶ್ರೀ ಇಮ್ಮಡಿ ಕರಿಬಸವ ದೇಶೀಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ನೂತನ ವಧು-ವರರಿಗೆ ಮಾಂಗಲ್ಯ ವಿತರಿಸಿ ಮಾತನಾಡಿದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು, ಉಕ್ಕಡಗಾತ್ರಿ ಸಂಪರ್ಕಿಸುವ ಪ್ರಮುಖ ಎರಡು ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಮತ್ತು ಹೊಸ ಸೇತುವೆ ನಿರ್ಮಾಣಕ್ಕೆ ಸಚಿವರಾದ ಸತೀಶ್ ಜಾರಕಿಹೊಳಿ, ಎಸ್. ಎಸ್.ಮಲ್ಲಿಕಾರ್ಜುನ್ ಅವರ ಮೇಲೆ ಒತ್ತಡ ಹಾಕುತ್ತೇನೆಂದರು.

ಶ್ರೀ ಗುರು ಕರಿಬಸವೇಶ್ವರ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ವಾಸನದ ಜಿ.ನಂದಿಗೌಡ್ರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಗ್ರಾ.ಪಂ ಅಧ್ಯಕ್ಷೆ ಭಾರಿ ಸಿದ್ದೇಶ್, ಉಪಾಧ್ಯಕ್ಷೆ ಗೀತಾ ಸಂಜೀವರೆಡ್ಡಿ, ಗದ್ದಿಗೆ ಟ್ರಸ್ಟ್ ಕಮಿಟಿಯ ನಾಗರಾಜ್ ದಿಲ್ಲಿವಾಲ, ಪ್ರಕಾಶ್ ಕೋಟೇರ್, ಬಸವರಾಜ್ ಪಾಳ್ಯದ್, ಹೆಚ್. ವೀರನಗೌಡ, ವಿವೇಕಾನಂದ ಪಾಟೀಲ್, ಗದಿಗೆಪ್ಪ ಹೊಸಳ್ಳಿ, ಗದಿಗೆಯ್ಯ ಪಾಟೀಲ್ ಮತ್ತು ಗೋವಿನಹಾಳ್ ರಾಜಣ್ಣ, ವಕೀಲ ನಂದಿತಾವರೆ ತಿಮ್ಮನಗೌಡ, ಯುವ ಕಲಾವಿದ ಅಜೇಯ್, ಮಂಜು ದೊಡ್ಮನಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಗದ್ದಿಗೆ ಟ್ರಸ್ಟ್ ಕಮಿಟಿಯ ಜಿಗಳಿ ಇಂದೂಧರ್ ಸ್ವಾಗತಿಸಿದರು. ಪ್ರಾಧ್ಯಾಪಕ ದಾವಣಗೆರೆಯ ಜೋಷಿ ನಿರೂಪಿಸಿದರೆ, ಕ್ಯಾಷಿಯರ್ ಗಣೇಶ್ ವಂದಿಸಿದರು.

# ಮಾಯಾವತಿ ತರಾಟೆ

**(3ನೇ ಪುಟದಿಂದ)** ಆ.21 ರಂದು ಸುಪ್ರೀಂ ತೀರ್ಪಿನ ವಿರುದ್ಧ ಕೆಲ ದಲಿತ ಹಾಗೂ ಬುಡಕಟ್ಟು ಸಂಘಟನೆಗಳು ಭಾರತ್ ಬಂದ್‌ಗೆ ಕರೆ ನೀಡಿದ್ದವು. ಆದರೆ, ಯುಪಿ ಸೇರಿದಂತೆ ದೇಶಾದ್ಯಂತ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು.


**Anu Solar Power Pvt. Ltd.,**




Near Reddy Building MCC A block, Bakkeshwara School Road, Davangere - 577 006.

98444 12807
99866 76462


**ಪುರಸಭಾ ಕಾರ್ಯಾಲಯ**

ಹರಪನಹಳ್ಳಿ - 583131, ವಿಜಯನಗರ ಜಿಲ್ಲೆ, ದೂರವಾಣಿ ಸಂಖ್ಯೆ : 08398-280258

ದಿನಾಂಕ : 23.08.2024

**ಸಾರ್ವಜನಿಕ ಪ್ರಕಟಣೆ**

ಈ ಕೆಳಕಂಡ 12ನೇವಾರ್ಡ ಪೂಜಾರಗೇರಿಯಲ್ಲಿ ಬರುವ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ, ನಮೂನೆ-3 ನೀಡುವ ಬಗ್ಗೆ ಅರ್ಜಿದಾರರಾದ ಶ್ರೀಮತಿ ದೇವಕ್ಕ ಗಂಡ ಲೇಟ್ ಮತ್ತಿಹಳ್ಳಿ ಚನ್ನಬಸಪ್ಪ ಇವರು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಕಛೇರಿ ದಾಖಲಾತಿಗಳಲ್ಲಿ ಅಳತೆ ಲಭ್ಯವಾಗದ ಪ್ರಯುಕ್ತ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಲಭ್ಯವಾದ ಅಳತೆಯನ್ನು ತೆರಿಗೆಯನ್ನು ನಿರ್ಧರಿಸಿ ವಸೂಲಿ ಮಾಡುವ ಸಲುವಾಗಿ ಕಛೇರಿ ವಹಿಯಲ್ಲಿ ನಮೂದಿಸಿ. ಮುಂದುವರೆಸುವ ಬಗ್ಗೆ ಅಕ್ಕ-ಪಕ್ಕದ ಹಾಗೂ ಹಕ್ಕು ಭಾದ್ಯತೆಯುಳ್ಳವರು ಪ್ರಕಟಣೆಗೊಂಡ ದಿನಾಂಕದಿಂದ 01 ತಿಂಗಳೊಳಗಾಗಿ ಧೃಡೀಕರಿಸುವ ದಾಖಲೆಗಳೊಂದಿಗೆ ಲಿಖಿತವಾಗಿ ಸಲಹೆ ? ಸೂಚನೆ / ಆಕ್ಷೇಪಣೆಗಳನ್ನು ಸಲ್ಲಿಸಲು ಕೋರಿದೆ. ಒಂದು ವೇಳೆ ನಿಗಧಿತ ಅವಧಿಯಲ್ಲಿ ಯಾವುದೇ ರೀತಿಯ ತಕರಾರು / ಆಕ್ಷೇಪಣೆಗಳು ಬಾರದೇ ಇದ್ದ ಪಕ್ಷದಲ್ಲಿ ಪುರಸಭೆ ಕಾಯ್ದೆಯನ್ವಯ ಸ್ಥಳದಲ್ಲಿ ಲಭ್ಯವಾದ ಅಳತೆಗಳನ್ನು ನಮೂದಿಸಿ ಅರ್ಜಿದಾರರ ಕೋರಿಕೆಯಂತೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಹಾಗೂ ಅವಧಿ ಮೀರಿ ಬರುವ ಯಾವುದೇ ರೀತಿಯ ಲಿಖಿತ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ.ಸಂ. | ಆಸ್ತಿ ಸಂಖ್ಯೆ | ನಮೂದಿಸ ಬೇಕಾದ ಅಳತೆ | ಚೆಕ್ಕುಬಂಧಿ | |
|---|---|---|---|---|
| 1 | 74.7/2364/ಎ9 | ಪೂ-ಪ 27 ಅಡಿ x ಉ-ದ 66 ಅಡಿ | ಪೂ | ಹೊಂಬಳಗಟ್ಟೆ ಪ್ರಕಾಶ ಇವರ ಮನೆ |
| | | | ಪ | ಕರಂಗಿ ಬಸಪ್ಪನ ಖಾಲಿ ಜಾಗ |
| | | | ಉ | ದಾರಿ |
| | | | ದ | ಕರಂಗಿ ಬಸಪ್ಪನ ಖಾಲಿ ಜಾಹ |

**ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಹಾಗೂ ಸಿ.ಜೆ.ಎಮ್. ಕೋರ್ಟ್, ದಾವಣಗೆರೆ**

**ಅಸಲು ದಾವೆ ನಂ. 51/2014**

ವಾದಿಗಳು : ಸಿ. ನಾರಪ್ಪ ವಿರುದ್ಧ ಪ್ರತಿವಾದಿಗಳು : ಮಹಮ್ಮದ್ ಇರ್ ಫಾನ್ ಐ.ಬಿ. ಮತ್ತು ಇತರರು, ಪ್ರತಿವಾದಿ ಸಂಖ್ಯೆ : 2 ಓ. ಚಂದ್ರಮೋಹನ್ ಬಿನ್ : ಓಂಕಾರಪ್ಪ, ವಯಸ್ಸು ಸುಮಾರು 51 ವರ್ಷ, ವ್ಯವಸಾಯ, ವಾಸ : ಅಣಬೇರು ಗ್ರಾಮ, ಮಾಯಕೊಂಡ, ಹೋಬಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ, (ದಿನಾಂಕ : 14.08.2024ರ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ)

**ಸಾರ್ವಜನಿಕ ಪ್ರಕಟಣೆ**

ವಾದಿಯರಾದ ಸಿ. ನಾರಪ್ಪ ಇವರು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಈ ಮೇಲೆ ತಿಳಿಸಿದ ವ್ಯಕ್ತಿಗಳ ಮಹಮ್ಮದ್ ಇರ್‌ಫಾನ್ ಐ.ಬಿ. ಮತ್ತು ಇತರರು, ಇವರುಗಳ ಮೇಲೆ ಈ ದಾವೆಯ ಆಸ್ತಿಯ ಮೇಲೆ ದಿನಾಂಕ : 21.03.2011ರ ಕ್ರಯದ ಕರಾರು ಪತ್ರದ ಆಧಾರದ ಅನ್ವಯ ನಿರ್ದಿಷ್ಟ ಪರಿಹಾರ ಕೋರಿ ದಾವೆ ಸಲ್ಲಿಸಿದ್ದು ಇರುತ್ತದೆ. ಘನ ನ್ಯಾಯಾಲಯವು ಈಗಾಗಲೇ ಈ ಮೇಲೆ ತಿಳಿಸಿದ ವ್ಯಕ್ತಿಯ ಮೇಲೆ ಹಲವು ಬಾರಿ ನೋಟಿಸ್ಸನ್ನು ಜಾರಿ ಗೊಳಿಸಿದ ಮೇಲೆ ಸದರಿ ಮೇಲೆ ತಿಳಿಸಿದ ಈ ಕೇಸಿನ 2ನೇ ಪ್ರತಿವಾದಿಯ ಮೃತ ಪಟ್ಟಿರುತ್ತಾರೆ ಎಂದು ನ್ಯಾಯಾಲಯದ ಆಮೀನರು ಘನ ನ್ಯಾಯಾಲಯಕ್ಕೆ ವರದಿಯನ್ನು ಮಾಡಿರುತ್ತಾರೆ. ಈ ಕೇಸಿನ ವಾದಿಗೆ ಈ ಕೇಸಿನ 2ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ ಹಾಗೂ ಅವರ ವಾರಸುದಾರರ ಬಗ್ಗೆ ಮಾಹಿತಿಯ ಸಹ ಇರುವುದಿಲ್ಲ ಈ ಸಂಬಂಧವಾಗಿ ವಾದಿಯು ದಿನಾಂಕ : 14.8.2024 ರಂದು ಘನ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಸದರಿ ಈ ಕೇಸಿನ 2ನೇ ಪ್ರತಿವಾದಿ ಬಗ್ಗೆ/ ಕುರಿತು ಯಾರಾದರು ಅವರ ಕಾನೂನು ಬದ್ಧ ವಾರಸುದಾರರು ಇದ್ದರೆ ಅವರುಗಳು ಸದರಿ ಈ ಕೇಸಿನ ಮುಂದಿನ ಮುದ್ದತ್ತು ದಿನಾಂಕ : 30.9.2024 ರಂದು ಸಮಯ ಬೆಳಿಗೆ 11 ಗಂಟೆಗ, ಈ ಕೇಸಿನ 2ನೇ ಪ್ರತಿವಾದಿಯರ ಕಾನೂನು ಬದ್ಧ ವಾರಸುದಾರರು ಯಾರಾದರು ಇದ್ದರೆ ತಾವುಗಳು ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಸದರಿ ಮುದ್ದತ್ತು ದಿನಾಂಕದಂದು ಈ ಮೇಲೆ ತಿಳಿಸಿದ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರರನ್ನು ಸಲ್ಲಿಸಲು ಈ ಮೂಲಕ ತಿಳಿಯ ಪಡಿಸಲಾಗಿದೆ. ತಪ್ಪಿದ್ದಲ್ಲಿ ತಮ್ಮ ಗೈರು ಹಾಜರಾತಿಯಲ್ಲಿ ಘನ ನ್ಯಾಯಾಲಯವು ತಮ್ಮ ಮೇಲೆ ಏಕ ಪಕ್ಷೀಯವಾಗಿ ಈ ದಾವೆಯನ್ನು ನಿರ್ಣಯಿಸಲಾಗುತ್ತದೆ ಎಂದು ಈ ಮೂಲಕ ತಿಳಯತಕ್ಕದ್ದು. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ 23.8.2024 ದಂದು ಕೊಡಲ್ಪಟ್ಟಿದೆ.

**ತುಕಾರಾಮಪ್ಪ ಅರಣಿ (ಟಿ.ಆರ್.ಎ)**
**ವಾದಿಪರ ವಕೀಲರು, ದಾವಣಗೆರೆ**
**ಮೊ : 94481 09768**

**ಆದೇಶದ ಮೇರೆಗೆ, ಶರಸ್ತೆದಾರರು**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ**
**ದಾವಣಗೆರೆ**





**ಮಾರಾಟವು 27-08-2024 ರಂದು ಕೊನೆಗೊಳ್ಳುತ್ತದೆ**

ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)

ಸೀರೆಗಳು ₹ 395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹ 74/ಮೀ.ನಿಂದ ಆರಂಭ | ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ

ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ, 2 ನೇ ಮುಖ್ಯ ರಸ್ತೆ, ಪಿ ಜೆ ವಿಸ್ತರಣೆ, ಎ ವಿ ಕಮಲಮ್ಮ ಮಹಿಳಾ ಕಾಲೇಜು ಎದುರು, ದಾವಣಗೆರೆ – 577002.

## ಸಂಶೋಧಕರಿಗಾಗಿ ಚಂದ್ರಯಾನ ಮಾಹಿತಿ ನೀಡಿದ ಇಸ್ರೋ

ನವದೆಹಲಿ, ಆ. 23 - ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ, ಮೂರನೇ ಚಂದ್ರಯಾನದ ಮೂಲಕ ದೊರೆತ ವೈಜ್ಞಾನಿಕ ಮಾಹಿತಿಯನ್ನು ವಿಶ್ವದಾದ್ಯಂತ ಇರುವ ಸಂಶೋಧಕರಿಗಾಗಿ ಬಿಡುಗಡೆ ಮಾಡಿದೆ. 55 ಗಿಗಾಬೈಟ್ ಗಾತ್ರದ ಮಾಹಿತಿಯನ್ನು ಬಿಡುಗಡೆ ಮಾಡಲಾಗಿದೆ. ವಿಕ್ರಂ ಲ್ಯಾಂಡರ್ ಹಾಗೂ ಪ್ರಗ್ಯಾನ್ ರೋವರ್ ಮೂಲಕ ಪಡೆಯಲಾದ ಮಾಹಿತಿಯನ್ನು ಬಿಡುಗಡೆ ಮಾಡಲಾಗಿದೆ.

ಕಳೆದ ವರ್ಷ ಆಗಸ್ಟ್ 23 ರಂದು ಚಂದ್ರಯಾನ ಯಶಸ್ಸು ಕಂಡಿತ್ತು. ಈ ಯಶಸ್ಸಿನ ಮೊದಲ ವರ್ಷಾಚರಣೆ ಸಂದರ್ಭ ದಲ್ಲಿ ಮಾಹಿತಿ ಬಿಡುಗಡೆ ಮಾಡಲಾಗಿದೆ. ಈ ಮಾಹಿತಿಯು ಚಂದ್ರಯಾನ ಉಪಕರಣ ರೂಪಿಸಿದವರಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ದೇಶ ಹಾಗೂ ವಿಶ್ವದ ಎಲ್ಲಾ ಸಂಶೋಧಕರಿಗೆ ಲಭ್ಯವಾಗಲಿದೆ ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

## ದಿದ್ದಿಗೆ ಪ್ರಾ.ಕೃ. ಸ. ಸಂಘಕ್ಕೆ ಆಯ್ಕೆ



ಜಗಳೂರು, ಆ. 23 - ಜಗಳೂರು ತಾಲ್ಲೂಕು ದಿದ್ದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್. ಕೆ. ಶಿವಕುಮಾರ್, ಉಪಾಧ್ಯಕ್ಷರಾಗಿ ಟಿ. ಚೌಡಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಿಡಿಓ ಹರೀಶ್ ಕುಮಾರ್, ಕಾರ್ಯದರ್ಶಿ ಡಿ.ಎಂ.ಮರುಳಸಿದ್ಧಯ್ಯ ತಿಳಿಸಿದ್ದಾರೆ.

## ಶ್ರೀ ಕ್ಷೇತ್ರ ಆನೆಕೊಂಡದಲ್ಲಿ ನಾಡಿದ್ದು ಬಸವೇಶ್ವರ ಸ್ವಾಮಿ ಕಾರಣಿಕ, ಜಾತ್ರೆ



ದಾವಣಗೆರೆ, ಆ. 23 - ಸಮೀಪದ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವವು ಇದೇ ದಿನಾಂಕ 26ರ ಶ್ರಾವಣದ ಕಡೇ ಸೋಮವಾರ ನಡೆಯಲಿದೆ. ಅಂದು ಸಂಜೆ 4 ಗಂಟೆಯಿಂದ ಶ್ರೀ ಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಮತ್ತು ನೀಲನಹಳ್ಳಿ ಶ್ರೀ ಆಂಜನೇಯಸ್ವಾಮಿ ಹಾಗೂ ನಿಟ್ಟುವಳ್ಳಿ ಶ್ರೀ ದುರ್ಗಾಂಬಿಕಾದೇವಿ ಹಾಗೂ ಸುತ್ತಮುತ್ತಲಿನ ಗ್ರಾಮದ ದೇವರುಗಳನ್ನೊಳ ಗೂಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆಯ ಮೂಲಕ ಸಂಚರಿಸಿ ಸಂಜೆ 6 ಗಂಟೆಗೆ ಕಾರಣಿಕ ನಡೆಯಲಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

## ನೇಪಾಳ : ಭಾರತದ ಯಾತ್ರಿಗಳಿದ್ದ ಬಸ್ ನದಿಗೆ ಉರುಳಿ 27 ಸಾವು

ನವದೆಹಲಿ, ಆ. 23 -ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಪ್ರವಾಸಿಗರಿದ್ದ ಬಸ್ ನೇಪಾಳದಲ್ಲಿ ನದಿಗೆ ಉರುಳಿ 27 ಜನ ಸಾವನ್ನಪ್ಪಿದ್ದಾರೆ. ನೇಪಾಳದ ಅಂಬೂಖೈರೆನಿ ಎಂಬ ಪ್ರದೇಶದಲ್ಲಿ ಅವಘಡ ಸಂಭವಿಸಿದೆ. ಬಸ್ ಗೋರಖ್‌ಪುರದಿಂದ ಕಠ್ಮಂಡು ಕಡೆ ತೆರಳುವಾಗ ಹೆದ್ದಾರಿಯಿಂದ ನದಿಗೆ ಉರುಳಿದೆ. 16 ಜನ ಸ್ಥಳದಲ್ಲೇ ಸಾವನ್ನಪ್ಪಿದರೆ, 11 ಜನ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಬಸ್‌ನಲ್ಲಿ ಒಟ್ಟು 43 ಜನ ಇದ್ದರು. ಮಹಾರಾಷ್ಟ್ರದಿಂದ 3 ಬಸ್‌ಗಳಲ್ಲಿ ಒಟ್ಟು 104 ಭಾರತೀಯರು ತೀರ್ಥಯಾತ್ರೆಗೆ ತೆರಳಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎವಿಕೆ ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ 3ನೇ ಮೇನ್, ರಾಮ್ & ಕೋ ವೃತ್ತ, ಶಿವಪ್ಪ ಹೌಸ್, ಜೈನ್ ಸ್ಕೂಲ್, ದಿನೇಶ್ ಶೆಟ್ಟಿ ಹೌಸ್ ರಾಮ ಮಂದಿರ ಹಾಗೂ ಸುತ್ತಮುತ್ತ ಬೆಳಗ್ಗೆ 10ರಿಂದ ಸಂಜೆ 4ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಬಸವರಾಜ್ ಎಂ. ನಿಧನ



ದಾವಣಗೆರೆ ಸಿಟಿ, ಎಂ.ಸಿ.ಸಿ. 'ಬಿ' ಬ್ಲಾಕ್, 12ನೇ ಮೇನ್, 5ನೇ ಕ್ರಾಸ್ ವಾಸಿ, (ರಿಟೇರ್ಡ್ ಕೆಇಬಿ ಸಿನಿಯರ್ ಅಕೌಂಟೆಂಟ್)

**ಬಸವರಾಜ್ ಎಂ.**

ರವರು ದಿನಾಂಕ 24.8.2024ರ ಮಧ್ಯರಾತ್ರಿ 12.25ಕ್ಕೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು, ಪತ್ನಿ, ಓರ್ವ ಪುತ್ರ, ಸೊಸೆ, ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್‌ನ 12ನೇ ಮೇನ್, 5ನೇ ಕ್ರಾಸ್‌ನಲ್ಲಿ ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 9 ಗಂಟೆಯವರೆಗೆ ಇರಿಸಲಾಗುವುದು. ಮೃತರ ಅಂತ್ಯಕ್ರಿಯೆಯು ದಿನಾಂಕ 24.08.2024ರ ಶನಿವಾರ ಚನ್ನಗಿರಿ ತಾಲ್ಲೂಕು ಬಸವಾ ಪಟ್ಟಣದಲ್ಲಿ ಸಂಜೆ 4ಕ್ಕೆ ನೆರವೇರಲಿದೆ.

ಇಂತಿ ದುಃಖ ತಪ್ತ ಕುಟುಂಬ ವರ್ಗ
ಮೊ : 99022 30139, 94494 72818

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ನಿಟುವಳ್ಳಿ ಹೊಸ ಬಡಾವಣೆ ವಾಸಿ
**ದಿ॥ ಶ್ರೀ ಹೆಚ್. ನೀಲಕಂಠಪ್ಪ**
ರಾಮಗೊಂಡನಹಳ್ಳಿ ಇವರ ಮಗನಾದ
**ಶ್ರೀ ಶಿವಕುಮಾರ್ ಹೆಚ್.ಎನ್.**
ಮಾಡುವ ವಿಜ್ಞಾಪನೆಗಳು.
ದಿನಾಂಕ : 16.08.2024ನೇ ಶುಕ್ರವಾರ ಬೆಳಿಗ್ಗೆ 6.00ಕ್ಕೆ ನನ್ನ ಪೂಜ್ಯ ತಾಯಿಯವರಾದ
**ಶರಣೆ ಹೆಚ್. ಹಾಲಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 24.08.2024ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಷ॥ಬ್ರ॥ ಡಾ.ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಶಿವಾಚಾರ್ಯ ನಿಕೇತನ, ಹಿರೇಮಠ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಗೀತಾ, ಶ್ರೀ ಹೆಚ್.ಎನ್. ಶಿವಕುಮಾರ್ ಮತ್ತು ಮಕ್ಕಳು, ರಾಮಗೊಂಡನಹಳ್ಳಿ, ದಿ॥ ಶ್ರೀಮತಿ ಜಯ್ಯಮ್ಮ, ಶ್ರೀಮತಿ ಶಾರದಮ್ಮ, ದಿ॥ ಶ್ರೀ ಎಸ್. ಹೆಚ್. ಹಾಲಪ್ಪ ಮತ್ತು ಮಕ್ಕಳು, ಹೂವಿನಮಡು, ಶ್ರೀ ಹೆಚ್. ಮಹೇಶ್ವರಪ್ಪ ಮತ್ತು ಸಹೋದರರು, ರಾಮಗೊಂಡನಹಳ್ಳಿ ಹೆಬ್ಬಾಳ್ ವಂಶಸ್ಥರು, ರಾಮಗೊಂಡನಹಳ್ಳಿ. ಹಾಗೂ ಬಂಧು-ಮಿತ್ರರು. ಫೋ. : 98862 73964**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)

ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಚುನಾವಣೆ ನಡೆಯಲಿದ್ದು, ನಿಮ್ಮ ಅತ್ಯಮೂಲ್ಯವಾದ ಮತವನ್ನು

**ಶ್ರೀ ಸಂದೀಪ್ ಅಣಬೇರು** ಕ್ರಮ, ಸಂಖ್ಯೆ **51**



ದಾವಣಗೆರೆ ಜಿಲ್ಲೆಯ ಏಕೈಕ ಅಭ್ಯರ್ಥಿಯಾದ ನನಗೆ ಹಾಗೂ ನಮ್ಮ ತಂಡದ 26 ಅಭ್ಯರ್ಥಿಗಳಿಗೆ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

| ಕ್ರ.ಸಂ. | ಅಭ್ಯರ್ಥಿ ಹೆಸರು |
|---|---|
| 01 | ಅಂಗಡಿ ಶಂಕರಪ್ಪ |
| 02 | ಈರೇಶ್ ಎನ್.ವಿ |
| 04 | ಉಮೇಶ ಬಣಕಾರ್ |
| 05 | ಕರೇಗೌಡ |
| 06 | ಗಿರೀಶ್ ಕುಮಾರ್ ಡಿ.ವಿ. |
| 07 | ಗುರಪ್ಪಾ ಚನ್ನಬಸಪ್ಪ ಮೆಟಗುಡ್ಡ |
| 11 | ಚನ್ನಪ್ಪ ಹೆಚ್.ಕೆ |
| 12 | ಚಂದ್ರಶೇಖರ್ ಎಸ್. ಶೆಟ್ಟರ್ |
| 14 | ನಟರಾಜ್ ಸಾಗರನಹಳ್ಳಿ |
| 15 | ನಂಜುಂಡೇಶ ಎನ್. |
| 17 | ನಾಗರಾಜ್ ಮ ಗೌರಿ |
| 21 | ಪೂರ್ಣೇಶ್ ಮೂರ್ತಿ ಎಂ. ಆರ್ |
| 22 | ಪ್ರವೀಣ್ ಹನುಮಶೆಟ್ಟಿ |
| 23 | ಬಸವರಾಜಪ್ಪ |

| ಕ್ರ.ಸಂ. | ಅಭ್ಯರ್ಥಿ ಹೆಸರು |
|---|---|
| 27 | ಮಲ್ಲಿಕಾರ್ಜುನಯ್ಯ ಸಿ. |
| 29 | ಮೋಹನ್ ವೀರಭದ್ರಪ್ಪ ಅಸುಂಡಿ |
| 32 | ರಾಜಶೇಖರ ಬಸವಣ್ಣೆಪ್ಪ ಸೀರಿ |
| 34 | ವಿಜಯಕುಮಾರ್ ಎ.ಪಿ. |
| 35 | ವಿರುಪಾಕ್ಷಯ್ಯ ಎಸ್. |
| 41 | ಶರಣಪ್ಪ ಬಸಪ್ಪ ಹ್ಯಾಟಿ |
| 42 | ಶಂಭುಲಿಂಗಪ್ಪ ನಿಜಪ್ಪ ಚಕ್ಕಡಿ |
| 43 | ಶಶಿಕಾಂತ್ ಬಿ. ಪಾಟೀಲ್ |
| 46 | ಸಂಗನಗೌಡ ಪಾಟೀಲ್ |
| 50 | ಸಂತೋಷ ಕುಮಾರ್ ಪಾಟೀಲ್ |
| 51 | **ಸಂದೀಪ್ ಅಣಬೇರು** |
| 54 | ಸೋಮನಾಥ ರೆಡ್ಡಿ |
| 55 | ಹರೀಶ್ ಆರಾಧ್ಯ ಆರ್. |

ನಿಮ್ಮ ಸಹಕಾರವೇ ನಮಗೆ ಶ್ರೀರಕ್ಷೆ.....

ಚುನಾವಣೆ ದಿನಾಂಕ : 25-08-2024, ಬೆಳಗ್ಗೆ 8-00 ಘಂಟೆಗೆ ಸಂಜೆ 5-00 ಘಂಟೆಯವರೆಗೆ
ಸ್ಥಳ: ಎ.ವಿ.ಕೆ.ಮಹಿಳಾ ಕಾಲೇಜ್ ಆವರಣ, ದಾವಣಗೆರೆ

## ಜನ್ಮದಿನೋತ್ಸವದ ಸ್ಮರಣೆ



ಸಮಾಜ ಕಲ್ಯಾಣ ಇಲಾಖೆಯ ಮಾಜಿ ಸಚಿವರಾದ

**ದಿ. ಡಾ॥ ವೈ. ನಾಗಪ್ಪನವರ**

ಜನ್ಮ ದಿನೋತ್ಸವದ ಸ್ಮರಣೆ ಹಾಗೂ
ಹರಿಹರದ ಶ್ರೇಯ ಹಾಸ್ಪಿಟಲ್‌ನ 7ನೇ ವಾರ್ಷಿಕೋತ್ಸವ

ಶುಭ ಕೋರುವವರು :
ಶ್ರೀಮತಿ ಜಯದೇವಿ ಡಾ॥ ವೈ. ನಾಗಪ್ಪ, ಮಕ್ಕಳು
ಅಳಿಯಂದಿರು, ಮೊಮ್ಮಕ್ಕಳು
ಶ್ರೇಯ ಹಾಸ್ಪಿಟಲ್ ಸಿಬ್ಬಂದಿ ವರ್ಗದವರು, ಹರಿಹರ. ಫೋ. : 08192 241666




ಶಿವಮೊಗ್ಗ ರಸ್ತೆ, ಹರಿಹರ.

## ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ಸಂಘ ನಿಯಮಿತ.,

MONEY PLANT

ಹೆಚ್.ಎಂ. ರಸ್ತೆ, ದಾವಣಗೆರೆ-01. ದೂ. : 08192 275566

### ಆಡಳಿತ ಮಂಡಳಿ ನಿರ್ದೇಶಕರುಗಳು



ಡಿ. ನಾಗರಾಜ ಮೂರ್ತಿ, ಅಧ್ಯಕ್ಷರು · ಹೆಚ್.ಎಂ. ಈಶಪ್ರಸಾದ್, ಉಪಾಧ್ಯಕ್ಷರು · ಹೆಚ್.ಎಂ. ಜಯರಾಜ್, ನಿರ್ದೇಶಕರು · ಎಸ್.ಎಚ್. ರಮೇಶ್, ನಿರ್ದೇಶಕರು · ಪಿ.ಎಂ. ವೀರಭದ್ರಯ್ಯ, ನಿರ್ದೇಶಕರು · ಜೆ.ಬಿ. ವಿಶ್ವನಾಥ್, ನಿರ್ದೇಶಕರು



ಟಿ.ಎಂ. ಗಿರೀಶ್, ನಿರ್ದೇಶಕರು · ಟಿ.ಎಂ.ಎಂ. ರಾಜೇಂದ್ರಕುಮಾರ್, ನಿರ್ದೇಶಕರು · ಶ್ರೀಮತಿ ಶಶಿಕಲಾಮೂರ್ತಿ, ನಿರ್ದೇಶಕರು · ಶ್ರೀಮತಿ ಜ್ಯೋತಿ ಪ್ರಸಾದ್, ನಿರ್ದೇಶಕರು · ಎಸ್.ಸಿ. ಉಮಾದೇವಿ, ಪ್ರಭಾರ ಸಿಇಓ, ಹಿರಿಯ ವ್ಯವಸ್ಥಾಪಕರು

### 11ನೇ ವಾರ್ಷಿಕ ಮಹಾಸಭೆಯ ನೋಟೀಸ್

2023-24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಈ ದಿನ ದಿನಾಂಕ : 24.08.2024 ಶನಿವಾರ ದಂದು ಶ್ರೀ ಸುಕೃತೀಂದ್ರ ಕಲಾ ಮಂದಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ-577 004. ಇಲ್ಲಿ ಬೆಳಗ್ಗೆ 11.30ಕ್ಕೆ ಕರೆಯಲಾಗಿದೆ. ಅಂಚೆಯ ಮೂಲಕ ಸದಸ್ಯರ ವಿಳಾಸಗಳಿಗೆ ನೋಟಿಸನ್ನು ಕಳುಹಿಸಲಾಗಿದೆ. ತಲುಪದೇ ಇದ್ದವರು ಈ ಪ್ರಕಟಣೆಯನ್ನು ಸಭೆಯ ನೋಟೀಸೆಂದು ಭಾವಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

| | 2022-2023 | 2023-2024 |
|---|---|---|
| ಷೇರು ಬಂಡವಾಳ | 31,23,200 | 39,52,200 |
| ನಿಧಿಗಳು | 1,18,49,413 | 1,43,07,187 |
| ಠೇವುಗಳು | 10,03,24,878 | 10,81,35,228 |
| ಸಾಲ ಮತ್ತು ಮುಂಗಡಗಳು | 8,18,53,527 | 10,03,30,526 |
| ಹೂಡಿಕೆಗಳು | 3,11,29,435 | 1,78,90,000 |
| ಲಾಭ | 30,44,562 | 40,19,732 |

ಸಹಿ/- ಡಿ. ನಾಗರಾಜ್‌ಮೂರ್ತಿ, ಅಧ್ಯಕ್ಷರು
ಸಹಿ/- ಹೆಚ್.ಎಂ. ಈಶಪ್ರಸಾದ್, ಉಪಾಧ್ಯಕ್ಷರು
ಸಹಿ/- ಎಸ್.ಸಿ. ಉಮಾದೇವಿ, ಮುಖ್ಯ ಕಾರ್ಯನಿರ್ವಾಹಕರು
ಸಹಿ/- ಶ್ರೀಮತಿ ಶಶಿಕಲಾಮೂರ್ತಿ, ನಿರ್ದೇಶಕರು
ಸಹಿ/- ಕೆ.ಎಸ್. ಮುರುಗೇಂದ್ರಪ್ಪ, ಚಾರ್ಟರ್ಡ್ ಅಕೌಂಟೆಂಟ್

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas